ಸಂಪುಟ : 9 ಸಂಚಿಕೆ 291 ಪುಟ : 4+2 ಬೆಲೆ: 3.00 ಬುಧವಾರ ಜನವರಿ 1 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 291 Pages : 4+2 Price : 3.00 Wednesday January 1 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಮಾಸಿಕ ಜ್ಞಾನಾಮೃತ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಸಂಭಾಪೂರ ರಸ್ತೆಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆಯ ಆವರಣದ ಶ್ರೀ ಕಾಶೀ ವಿಶ್ವನಾಥನ ಸನ್ನಿಧಿಯಲ್ಲಿ 181ನೇ ಮಾಸಿಕ ಶ್ರೀ ಸಿದ್ಧಾಂತ ಶಿಖಾಮಣಿ ಜ್ಞಾನಾಮೃತ ಕಾರ್ಯಕ್ರಮವು ಜನವರಿ 1ರಂದು ಸಾಯಂಕಾಲ 6.30ಕ್ಕೆ ನಡೆಯಲಿದೆ.

ಪ್ರಾತಃಕಾಲದಲ್ಲಿ ಪಾಠಶಾಲಾ ವಿದ್ಯಾರ್ಥಿಗಳಿಂದ ಶ್ರೀ ಕಾಶೀ ವಿಶ್ವನಾಥನಿಗೆ ಮಹಾ ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಮಹಾಮಂಗಳಾರತಿ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಸಾಯಂಕಾಲ ಜ್ಞಾನಾಮೃತ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಷ.ಬ್ರ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಬೃಹನ್ಮಠ ಅಡ್ನೂರ ಗದಗ-ರಾಜೂರ ಇವರು ವಹಿಸಿಕೊಳ್ಳಲಿದ್ದಾರೆ.

ಅಧ್ಯಕ್ಷತೆಯನ್ನು ಜ್ಞಾನಾಮೃತ ಸಮಿತಿಯ ಅಧ್ಯಕ್ಷ ಎಸ್.ಎಸ್. ಮೇಟಿ ವಹಿಸಿಕೊಳ್ಳಲಿದ್ದಾರೆ. ರಾಜ್ಯೋತ್ಸವ ಪಡೆದ ನಿಮಿತ್ತ ಜಿ.ಬಿ. ಬಿಡನಾಲರಿಗೆ ಗುರುರಕ್ಷಾ ಆಶಿರ್ವಾದ, ಉಪನ್ಯಾಸಕರಾಗಿ ರಾಮಚಂದ್ರ ಕೆ.ಮೋನೆ ಆಗಮಿಸಿ ಧಾರ್ಮಿಕ ನಿತ್ಯ ಆಚರಣೆಯ ಮಹತ್ವದ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜ್ಞಾನಾಮೃತ ಸಮಿತಿಯ ಎಲ್.ಪಿ. ಕಂಬಿ ಹಾಗೂ ಕಾಶೀ ಪೀಠದ ರುದ್ರಬಳಗದ ತಾಯಂದಿರು ಮತ್ತು ಭಕ್ತಾದಿಗಳು ಬಾಗವಹಿಸುವರು. ಕಾರ್ಯಕ್ರಮದ ಭಕ್ತಿಸೇವೆಯನ್ನು ಶ್ರೀ ಚನ್ನಬಸವರಾಜ ಶಿವಮೂರ್ತಯ್ಯ ಹಿರೇಮಠ ಕುಟುಂಬವರ್ಗದವರು ವಹಿಸಿಕೊಂಡಿದ್ದಾರೆ. ಸರ್ವ ಸದ್ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಶ್ವನಾಥನ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಜ್ಞಾನಾಮೃತ ಮತ್ತು ಪಾಠಶಾಲಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಚಿನ್ನ ವಂಚನೆ ಪ್ರಕರಣ: ಐಶ್ವರ್ಯಾ ಗೌಡ ಬಿಡುಗಡೆಗೆ ಹೈಕೋರ್ಟ್ ಆದೇಶ!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಚಿನ್ನ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯಾ ಗೌಡ ಬಿಡುಗಡೆಗೆ ಹೈಕೋರ್ಟ್ ಆದೇಶ ಹೊರಡಿಸಿದೆ.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಜ್ಯುವೆಲ್ಲರ್ಸ್ ಮಾಲೀಕರಿಗೆ 14 ಕೆಜಿ ಚಿನ್ನ ವಂಚಿಸಿದ ಪ್ರಕರಣದಲ್ಲಿ ಆರೋಪಿ ಐಶ್ವರ್ಯಾ ಗೌಡ ಹಾಗೂ ಅವರ ಪತಿ ಹರೀಶ್ ಅವರನ್ನು ಪೊಲೀಸರು ಬಂಧಿಸಿದ್ದರು.

ಈ ಬಂಧನ ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಆರೋಪಿ ಐಶ್ವರ್ಯಾ ಗೌಡ, ಪತಿ ಹರೀಶ್ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಇಬ್ಬರನ್ನು ಬಿಡುಗಡೆ ಮಾಡಲು ಆದೇಶ ನೀಡಿದೆ. ಪೊಲೀಸರು ಬಂಧನಕ್ಕೆ ಕಾರಣ ತಿಳಿಸದೆ ಬಂಧಿಸಿರುವುದರಿಂದ ಈಗ ಬಿಡುಗಡೆ ಮಾಡಲು ಸೂಚನೆ ನೀಡಿದೆ.

ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಲು ಬಿ.ಬಿ. ಅಸೂಟಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ಮನವಿ

ಕುಡಿಯುವ ನೀರಿನ ಬವಣೆ ನೀಗಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಕಳೆದ 15 ದಿನಗಳಿಂದ ತುಂಗಭದ್ರ ಕುಡಿಯುವ ನೀರು ಪೂರೈಕೆಯಾಗದ ಹಿನ್ನೆಲೆಯಲ್ಲಿ ಸಾರ್ವಜನಿಕರು ತೆ-ಂದರೆ ಅನುಭವಿಸುತ್ತಿದ್ದು, ಕೂಡಲೇ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ ನೇತೃತ್ವದಲ್ಲಿ ನಗರಸಭೆ ಕಾಂಗ್ರೆಸ್ ಸದಸ್ಯರು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ನೀರು ಪೂರೈಕೆಯಲ್ಲಿ ವ್ಯತ್ಯಯ

ಗದಗ-ಬೆಟಗೇರಿ ಅವಳಿ ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಹಮ್ಮಿಗಿ ಜ್ಯಾಕ್‌ವೆಲ್‌ನಿಂದ ಡಂಬಳ ಮಧ್ಯಂತರ ಪಂಪಿಂಗ್ ಸ್ಟೇಷನ್‌ಗೆ ಬರುವ ಸಿಂಗಟಾಲೂರ ಹಿಂಭಾಗದಲ್ಲಿ ಮುಖ್ಯ ಕೊಳವೆ ಮಾರ್ಗಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರ ದುರಸ್ತಿ ಕಾರ್ಯ ಪೂರ್ಣಗೊಳ್ಳುವವರೆಗೂ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದರಿಂದ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅವಳಿ ನಗರದಲ್ಲಿ ಈಗಾಗಲೇ ಹಲವಾರು ವಾರ್ಡ್‌ಗಳಲ್ಲಿ ಕೊಳವೆಬಾವಿ ಪೈಪ್ ಮತ್ತು 24*7 ನೀರಿನ ಪೈಪ್‌ಲೈನ್ ಒಡೆದು ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಅದನ್ನು ಸರಿಪಡಿಸಲು ಹಲವಾರು ಬಾರಿ ಪೌರಾಯುಕ್ತರಿಗೆ ಮತ್ತು ಸಹಾಯಕ ಅಭಿಯಂತರರ ಗಮನಕ್ಕೆ ತಂದಿದ್ದರೂ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅವಳಿ ನಗರದಲ್ಲಿ ಕುಡಿಯುವ ನೀರಿನ ಪೂರೈಕೆ ಸಂಪೂರ್ಣ ಹದಗೆಟ್ಟಿದ್ದು, ಕುಡಿಯುವ ನೀರಿನ ತೊಂದರೆ ಆದಲ್ಲಿ ತಕ್ಷಣ ಸಂಬಂಧಿಸಿದ ವಾರ್ಡ್‌ಗಳಿಗೆ ನೀರು ಪೂರೈಸಲು 5 ಟ್ಯಾಂಕರ್‌ಗಳನ್ನು ಬಾಡಿಗೆ ರೂಪದಲ್ಲಿ ಪಡೆದುಕೊಳ್ಳಲು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ನಗರದ 35 ವಾರ್ಡ್‌ಗಳಲ್ಲಿ ಬೋರ್‌ವೆಲ್ ಹಾಗೂ ಪೈಪ್‌ಲೈನ್‌ನ್ನು ಹೊಸದಾಗಿ ಹಾಕುವುದು ಮತ್ತು ರಿಪೇರಿ ಮಾಡಲು ಪ್ರತಿ ಒಂದು ವಾರ್ಡಿಗೆ ತಲಾ 5 ಲಕ್ಷ ರೂ. ಟೆಂಡರ್ ಕರೆಯಲಾಗಿದ್ದು, ಈವರೆಗೂ ಟೆಂಡರ್ ಓಪನ್ ಮಾಡಿಲ್ಲ. ತಕ್ಷಣ ಟೆಂಡರ್ ಓಪನ್ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

> ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ ಗೋವಿಂದರೆಡ್ಡಿ, 35 ವಾರ್ಡ್‌ಗಳಲ್ಲಿ ಬೋರ್‌ವೆಲ್ ಹಾಗೂ ಪೈಪ್‌ಲೈನ್ ಹೊಸದಾಗಿ ಹಾಕುವುದು ಮತ್ತು ರಿಪೇರಿ ಮಾಡಲು ಪ್ರತಿ ಒಂದು ವಾರ್ಡಿಗೆ ನಿಗದಿಯಾಗಿರುವ 5 ಲಕ್ಷ ರೂ. ಮೊತ್ತದ ಟೆಂಡರ್‌ನ್ನು ಕೂಡಲೇ ಓಪನ್ ಮಾಡುವುದರ ಜೊತೆಗೆ ಕಾಲುವೆ ಮೂಲಕ ಡಂಬಳ ಕಿನಾಲ್‌ಗೆ ನೀರು ಹರಿಸಿ ಅವಳಿ ನಗರದ ಜನತೆಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ಜರುಗಿಸಲು ಪೌರಾಯುಕ್ತರಿಗೆ ಸೂಚನೆ ನೀಡಿದರು.

ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ, ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ, ನಗರಸಭೆ ವಿರೋಧ ಪಕ್ಷದ ಉಪನಾಯಕ ಬರಕತ್‌ಅಲಿ ಮುಲ್ಲಾ, ಸದಸ್ಯರದ ಲಕ್ಷ್ಮೀ ಸಿದ್ದಮ್ಮನಹಳ್ಳಿ, ಶಕುಂತಲಾ ಅಕ್ಕಿ, ನಗರಸಭೆ ಮಾಜಿ ಸದಸ್ಯರಾದ ಅನಿಲ ಗರಗ, ಚಾಂದ್ ಕೊಟ್ಟೂರು, ಗದಗ ಜಿಲ್ಲಾ ಕಾಂಗ್ರೆಸ್ ಎಸ್‌ಟಿ ಘಟಕದ ಉಪಾಧ್ಯಕ್ಷ ವಸಂತ್ ಸಿದ್ದಮ್ಮನಹಳ್ಳಿ, ಮುಖಂಡರಾದ ಮುನ್ನಾ ರೇಶ್ಮಿ, ಲಕ್ಷ್ಮಣ ಭಜಂತ್ರಿ, ಸಮೀರ ಕೊಟ್ಟೂರ ಸೇರಿ ಹಲವರು ಇದ್ದರು.

ತೋಂಟದಾರ್ಯ ಶ್ರೀಮದರ್ಧನಾರೀಶ್ವರರ 285ನೇ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ

ಲಿಂಗಾಯತ ಧರ್ಮ ಒಂದು ಜಾತಿಗೆ ಮೀಸಲಾಗಿಲ್ಲ

■ ವಿಜಯಸಾಕ್ಷಿ ಸುದ್ದಿ, ಡಂಬಳ

ಲಿಂಗಾಯತ ಧರ್ಮ ಪ್ರಾರಂಭದ ಬಗ್ಗೆ 900 ವರ್ಷಗಳ ಇತಿಹಾಸವಿದೆ ಮತ್ತು ಮಠಗಳ ಕಾರ್ಯಗಳ ಬಗ್ಗೆ 600 ವರ್ಷಗಳ ಇತಿಹಾಸ ಅಡಗಿರುವ ಲಿಂಗಾಯತ ಧರ್ಮ ಒಂದು ಜಾತಿಗೆ ಮೀಸಲು ಅಲ್ಲ. ಬಸವಾದಿ ಶರಣರು ಹಾಕಿಕೊಟ್ಟ ಜಾತಿ, ಮತ, ಪಂಥ ಹೊಡೆದೋಡಿಸುವ ವಿಶಿಷ್ಟ ಧರ್ಮ ಲಿಂಗಾಯತ ಧರ್ಮವಾಗಿದೆ ಎಂದು ಡಾ. ಜಗದ್ಗುರು ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಡಂಬಳ ಗ್ರಾಮದ ಆರಾಧ್ಯ ದೇವರಾದ ಜಗದ್ಗುರು ತೋಂಟದಾರ್ಯ ಶ್ರೀಮದರ್ಧನಾರೀಶ್ವರ ಮಠದ 285ನೇ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಲಿಂ.ಡಾ.ತೋಟದ ಸಿದ್ಧಲಿಂಗ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡುತ್ತಿದ್ದರು.

ಅಂದು ಅರ್ಧನಾರೀಶ್ವರರು ಎಲ್ಲವನ್ನೂ ಬಲ್ಲ ಶಿವಯೋಗಿಗಳಾಗಿದ್ದರು. ಅಷ್ಟೇ ಅಲ್ಲದೇ, ರಾಜ-ಮಹಾರಾಜರ ಸಂಸ್ಥಾನಿಕರ ಮೇಲೆ ಪ್ರಭಾವ ಬೀರಿದ ಮಹಾನ್ ಚೇತನರಾಗಿದ್ದರು. ನಾಡಿನ

ಜಾತ್ರೆಗಳಲ್ಲೇ ತೋಂಟದಾರ್ಯ ಮಠದ ಜಾತ್ರೆಯು ವೈಚಾರಿಕ-ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಡೆಯುವ ಅಪರೂಪದ ಜಾತ್ರೆಯಾಗಿದೆ. ಧರ್ಮ ಶ್ರದ್ಧೆಯಿಂದ, ವಿಶ್ವಾಸದಿಂದ ಜಾತ್ರಾ ಮಹೋತ್ಸವದ ಆಚರಣೆಗೆ ಭಕ್ತರು ಮುಂದಾಗಿರುವುದು ಪ್ರಶಂಸನೀಯ. ಗ್ರಾಮೀಣ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಜಾತ್ರಾ ಮಹೋತ್ಸದಲ್ಲಿ ನಿರಂತರವಾಗಿ ಜರಗಬೇಕು ಎಂದು ಹೇಳಿದರು.

ವೇದ ಮೂರ್ತಿ ರಾಜಶೇಖರಯ್ಯ ಹಿರೇಮಠ ಮಾತನಾಡಿ, 285ನೇ ಜಾತ್ರಾ ಮಹೋತ್ಸವವು ಮಘಾನಕ್ಷತ್ರದಲ್ಲಿ ಫೆ.13ರಂದು ಮಹಾರಥೋತ್ಸವ, ಫೆ.14ರಂದು ಲಘು ರಥೋತ್ಸವ ಜರುಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿ.ವಿ. ಹಿರೇಮಠ,

> ಜಾತ್ರಾ ಸಮಿತಿಯ ಅಧ್ಯಕ್ಷರಾಗಿ ಭೀಮಪ್ಪ ಗದಗಿನ, ಉಪಾಧ್ಯಕ್ಷರಾಗಿ ಯಲ್ಲಪ್ಪ ದಂಡಿನ, ಕಾರ್ಯದರ್ಶಿಯಾಗಿ ದುರಗಪ್ಪ ಹರಿಜನ, ಖಜಾಂಚಿ ಶರಣಪ್ಪ ಬಂಡಿ ಅವರು ಆಯ್ಕೆಯಾದರೆ, ದಾಸೋಹ ಸಮಿತಿ ಅಧ್ಯಕ್ಷ ಮರಿತೇಮಪ್ಪ ಆದಮ್ಮನವರ, ಉತ್ಸವ ಸಮಿತಿ ಅಧ್ಯಕ್ಷ ಬಸುರಾಜ ಶಿರೋಳ, ಪ್ರಚಾರ ಸಮಿತಿ ಅಧ್ಯಕ್ಷ ವಿಜಯ ಸೊರಟೂರ ಸೇರಿದಂತೆ ಎಲ್ಲಾ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ವಿ.ಎಸ್. ಯರಾಶಿ, ಮಹೇಶ ಗಡಗಿ, ರಾಮಣ್ಣ ಮೇಗಲಮನಿ, ಬಶೀರಹಮ್ಮದ ತಾಂಬೋಟಿ, ಮುರ್ತುಜಾ ಮನಿಯಾರ, ಸುರೇಶ ಗಡಗಿ, ಶರಣು ಬಂಡಿಹಾಳ, ಗವಿಸಿದ್ಧಪ್ಪ ಹಾದಿಮನಿ, ನಿಂಗಪ್ಪ ಮಳ್ಳನ್ನವರ, ಜಯಣ್ಣ ಜೋಳದ, ಸಿದ್ದಣನಗೌಡ ಜಾಯನಗೌಡ, ಯಲ್ಲಪ್ಪ ಸಂದಿಗವಾಡ, ಸಿದ್ಧಲಿಂಗಯ್ಯ ಭೂಸನೂರಮಠ, ಮುತ್ತಣ್ಣ ಕೊಂತಿಕಲ್ಲ, ಮಲ್ಲಪ್ಪ ರೇವಡಿ, ಮಲ್ಲಣ್ಣ ಗಡಗಿ, ವಿರೂಪಾಕ್ಷಪ್ಪ ಲಕ್ಕುಂಡಿ, ಬಸವರಾಜ ಹಮ್ಮಿಗಿ, ಅಶೋಕ ಮಾನೆ, ರಮೇಶ ಕೊರ್ಲಹಳ್ಳಿ, ಸಿದ್ದಯ್ಯ ಕಾಡಸಿದ್ದೇಶ್ವರಮಠ, ಈಶಣ್ಣ ಪಟ್ಟಣಶೆಟ್ಟರ ಸೇರಿದಂತೆ ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಇದ್ದರು.

ರೈತ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಸೊರಟೂರ ಗ್ರಾಮದ ಹುಸೇನಸಾಬ ದಾವಲಸಾಬ ಬಾಬುಖಾನವರ ಇವರ ದನದ ಶೆಡ್ಡಿಗೆ ವಿದ್ಯುತ್ ಅವಘಡದಿಂದ ಬೆಂಕಿ ತಗುಲಿ, ಒಂದು ಎತ್ತು ಮರಣಹೊಂದಿದ್ದು,ಒಂದು ಎತ್ತು, ಒಂದು ಎಮ್ಮೆ ಗಾಯಗೊಂಡಿದ್ದವು. ಹಾನಿಗೊಳಗಾದ ರೈತ ಹುಸೇನಸಾಬ ಬಾಬುಖಾನವರಿಗೆ ಕಾನೂನು, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್. ಕೆ. ಪಾಟೀಲರು 90 ಸಾವಿರ ರೂಪಾಯಿಗಳ ಪರಿಹಾರದ ಚೆಕ್‌ನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಗದಗ ವಿಭಾಗದ ಹೆಸ್ಕಾಂ ಇಂಜಿನಿಯರ್ ರಾಜೇಶ ಕಲ್ಯಾಣಶೆಟ್ಟರ, ಪಶುಸಂಗೋಪನೆ ಇಲಾಖೆ ಅಧಿಕಾರಿಗಳು, ಕೃಷಿ ಇಲಾಖೆ ಅಧಿಕಾರಿಗಳು, ಸಿದ್ದಲಿಂಗೇಶ್ವರ ಪಾಟೀಲ, ಸೊರಟೂರ ಗ್ರಾ.ಪಂ ಸದಸ್ಯರಾದ ಮರಿಯಪ್ಪ ಹ.ಸಣ್ಣತಂಗಿಯವರ, ಮೌಲಾಸಾಬ ದಾ.ಬಾಬುಖಾನವರು ಉಪಸ್ಥಿತರಿದ್ದರು.

ಹಾಲಕೆರೆ ಅನ್ನದಾನೇಶ್ವರ ಮಹಾರಥೋತ್ಸವ ಜ 3ಕ್ಕೆ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಹಾಲಕೆರೆ ಗ್ರಾಮದ ಅನ್ನದಾನೇಶ್ವರ ಸಂಸ್ಥಾನಮಠದ ಲಿಂಗೈಕ್ಯ ಹಿರಿಯ ಅನ್ನದಾನ ಸ್ವಾಮಿಗಳ 112ನೇ ಪುಣ್ಯಸ್ಮರಣೋತ್ಸವ, ಲಿಂಗೈಕ್ಯ ಅಭಿನವ ಅನ್ನದಾನ ಸ್ವಾಮಿಗಳ ತೃತೀಯ ಪುಣ್ಯಸ್ಮರಣೋತ್ಸವ ಹಾಗೂ 174ನೇ ಅನ್ನದಾನೇಶ್ವರ ಮಹಾರಥೋತ್ಸವದ ಕಾರ್ಯಕ್ರಮಗಳು ಜ. 2, 3ರಂದು ನಡೆಯಲಿವೆ.

ಜ. 2ರಂದು ಮಧ್ಯಾಹ್ನ 12ಕ್ಕೆ ಮಹಾಗಣಾರಾಧನೆ ನಡೆಯಲಿದೆ. ಸಂಜೆ 6.30ಕ್ಕೆ ನಡೆಯುವ ಸ್ವಾಮೀಜಿಗಳ ಪುಣ್ಯಸ್ಮರಣೋತ್ಸವದ ಸಾನ್ನಿಧ್ಯವನ್ನು ಒಳಬಳ್ಳಾರಿಯ ಸುವರ್ಣಗಿರಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ವಹಿಸುವರು. ನಂದವಾಡಗಿ-ಆಳಂದದ





ಮಹಾಂತೇಶ್ವರ ಹಿರೇಮಠದ ಮಹಾಂತಲಿಂಗ ಶಿವಾಚಾರ್ಯರು, ಚಳಗೇರಿಯ ವೀರಸಂಗಮೇಶ್ವರ ಶಿವಾಚಾರ್ಯರು, ದರೂರು ಸಂಗನಬಸವೇಶ್ವರ ಮಠದ ಕೊಟ್ಟೂರು ಸ್ವಾಮೀಜಿ, ಶ್ರೀಧರಗಡ್ಡೆ ಮರಿಕೊಟ್ಟೂರು ದೇಶಿಕರು, ಸೋಮಸಮುದ್ರದ ಸಿದ್ದಲಿಂಗ ದೇಶಿಕರು, ಬೂದಗುಂಪದ ಸಿದ್ಧೇಶ್ವರ ದೇಶಿಕರು, ಸಂಗನಹಾಲದ ವಿಶ್ವೇಶ್ವರ ದೇವರು ಪಾಲ್ಗೊಳ್ಳಲಿದ್ದಾರೆ. ಬಾಲಕೋಟೆಯ ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ಜಿ.ಜಿ. ಹಿರೇಮಠ ಉಪನ್ಯಾಸ ನೀಡಲಿದ್ದಾರೆ.

ಜ. 3ರಂದು ಬೆಳಿಗ್ಗೆ 5ರಿಂದ 7ರವರೆಗೆ ಸ್ವಾಮೀಜಿಯವರ ಗದ್ದುಗೆಗಳಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಂಗಳಾರತಿ ಜರುಗಲಿದೆ. ಬೆಳಿಗ್ಗೆ 10ಕ್ಕೆ ನಾಗಲಾಪುರ-ಕುರುಗೋಡಿನ ಮಠದ ನಿರಂಜನಪ್ರಭು ಸ್ವಾಮಿಗಳ ಒಪ್ಪತ್ತೇಶ್ವರಸ್ವಾಮಿ ಸಮ್ಮುಖದಲ್ಲಿ ಜಂಗಮೋತ್ಸವ ನಡೆಯಲಿದೆ. ಸಂಜೆ 5ಕ್ಕೆ ಜರುಗುವ 174ನೇ ಅನ್ನದಾನೇಶ್ವರ ಮಹಾರಥೋತ್ಸವದಲ್ಲಿ ಇಟಗಿ ಗ್ರಾಮಸ್ಥರು ಕಲಾತ್ಮಕವಾದ ಡಮಣಿ ಗಾಡಿಯಲ್ಲಿ ತೇರಿನ ಹಗ್ಗವನ್ನು ತರುವರು.

ಹೊಸಳ್ಳಿಯ ಗ್ರಾಮಸ್ಥರು ನಂದಿಕೋಲು ಸೇವೆ ಸಲ್ಲಿಸಲಿದ್ದಾರೆ. ಸಂಜೆ 6ಕ್ಕೆ ಅನ್ನದಾನೇಶ್ವರ ಕಾರ್ತಿಕೋತ್ಸವ ನಡೆಯಲಿದೆ. ನಂತರ ನಡೆಯುವ ಧಾರ್ಮಿಕ ಸಭೆಯಲ್ಲಿ ಶಿವಾನುಭವಗೋಷ್ಠಿ ಹಾಗೂ ಹಾಲಕೆರೆ ಐಸಿರಿ ಗ್ರಂಥ ಬಿಡುಗಡೆ ನಡೆಯಲಿದೆ. ಉತ್ತಂಗಿ-ಕೊಟ್ಟೂರು ಕೊಟ್ಟೂರೇಶ್ವರ ಮಠದ ಸೋಮಶೇಖರ ಸ್ವಾಮೀಜಿ, ಕೊಟ್ಟೂರಿನ ಡೋನೂರು ಜಾನಕೋಟಿಮಠದ ಸಿದ್ದಲಿಂಗ ಶಿವಾಚಾರ್ಯರು, ತೆಲಂಗಾಣ ನೇರಡಗಂಬದ ಪಶ್ಚಿಮಾದ್ರಿ ಮಠದ ಸಿದ್ದಲಿಂಗ ಸ್ವಾಮೀಜಿ, ಖೇಳಗಿಯ ಶಿವಲಿಂಗೇಶ್ವರ ಸಂಸ್ಥಾನ ಮಠದ ಶಿವಲಿಂಗ ಸ್ವಾಮೀಜಿ, ಜಿಗೇರಿಯ ಗುರುಸಿದ್ದ ಶಿವಾಚಾರ್ಯರು, ಗುಳೇದಗುಡ್ಡದ ಮರಡಿಮಠದ ಕಾಡಸಿದ್ದೇಶ್ವರ ಶಿವಾಚಾರ್ಯರು, ಹೊಸಪೇಟೆಯ ಕೆಂಪಿನಸ್ವಾಮಿಮಠದ ಸಿದ್ದಲಿಂ

ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ

■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಜ್ಞಾನವಿಕಾಸ ಕಾರ್ಯಕ್ರಮದ ಅಡಿಯಲ್ಲಿ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ್ ಜೆ. ಉದ್ಘಾಟಿಸಿದರು.

ಜ್ಞಾನವಿಕಾಸ ಕೇಂದ್ರದ ಸರ್ವ ಸದಸ್ಯರಿಗೂ ಜ್ಞಾನವಿಕಾಸ ಕಾರ್ಯಕ್ರಮಗಳ ಬಗ್ಗೆ ಮತ್ತು ಯೋಜನೆ ಬಗ್ಗೆ ಮತ್ತು ಗ್ರಾಮ ಅಭಿವೃದ್ಧಿ ಯೋಜನೆಯಲ್ಲಿ ಯೋಜನೆಯಲ್ಲಿ ಸದಸ್ಯರಿಗೆ ಸಿಗುವ ಪ್ರತಿಯೊಂದು ಸೌಲಭ್ಯಗಳು ಕುರಿತು ಎಲ್ಲಾ ಸದಸ್ಯರಿಗೂ ಮಾಹಿತಿ ಮಾರ್ಗದರ್ಶನ ನೀಡಿದರು.

ಜಿಲ್ಲಾ ನಿರ್ದೇಶಕರಾದ ಯೋಗೇಶ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳು, ಕೇಂದ್ರದ ಕಾರ್ಯಕ್ರಮಗಳು ಹಾಗೂ ತಂಡಗಳ ಗುಣಮಟ್ಟದ ಬಗ್ಗೆ ಮತ್ತು ಶಿಸ್ತಿನ ಕಾರ್ಯಕ್ರಮಗಳ ಮಾಡಿಕೊಂಡು ಹೋಗುವುದರ ಬಗ್ಗೆ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಯಾದ ಕವಿತಾ ದಂಡಿನ ಮಕ್ಕಳ ಶಿಕ್ಷಣದ ತಂತ್ರಜ್ಞಾನ ಬಳಕೆಯಲ್ಲಿ ಪೋಷಕರ ಪಾತ್ರದ ಬಗ್ಗೆ ಮಾಹಿತಿ ನೀಡಿದರು. ವಿಜಯಲಕ್ಷ್ಮಿ ಹೂಗಾರ ನೀರಿನ ಸದ್ಬಳಕೆಯಲ್ಲಿ ನಮ್ಮೆಲ್ಲರ ಪಾತ್ರದ ಬಗ್ಗೆ ಎಲ್ಲಾ ಸದಸ್ಯರಿಗೂ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಸುರೇಂದ್ರ ನಾಯಕ, ಜ್ಞಾನವಿಕಾಸ ಕೇಂದ್ರದ ಸದಸ್ಯರು ಹಾಗೂ ಒಕ್ಕೂಟದ ಅಧ್ಯಕ್ಷೆ ಲತಾ ಪತ್ತಾರ, ಜ್ಞಾನವಿಕಾಸ ಸಮನ್ವಯಧಿಕಾರಿ ಗಂಗಮ್ಮ, ಮೇಲ್ವಿಚಾರಕರು, ಜ್ಞಾನವಿಕಾಸ ಸಂಯೋಜಕಿಯರು ಹಾಗೂ ಕೇಂದ್ರದ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಇಂದು ಚನ್ನಯ್ಯ ಹಿರೇಮಠರ 81ನೇ ವರ್ಷದ ಜನ್ಮದಿನದ ನಿಮಿತ್ತ ಲೇಖನ

ನಡೆನುಡಿಯ ಚಿನ್ನದ ಅಂಬಾರಿ ಚನ್ನಯ್ಯ ಹಿರೇಮಠ

ಶ್ರೀಗಳ ಒಡನಾಡಿ, ಲಿಂಗೈಕ್ಯ ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಗುರುಬಸವ ಮಹಾ ಸ್ವಾಮಿಗಳು, ಲಿಂಗೈಕಗಯ ಶ್ರೀಮನ್ ನಿರಂಜನ ಜಗದ್ಗುರು ಶಿವಕುಮಾರ ಮಹಾಸ್ವಾಮಿಗಳು, ಲಿಂಗೈಕ್ಯ ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಸಿದ್ದಲಿಂಗ ಸ್ವಾಮೀಜಿಗಳು, ಶ್ರೀಮನ ನಿರಂಜನ ಜಗದ್ಗುರು ಪೂಜ್ಯ ಶ್ರೀ ತೋಂಟದ ಶಿದ್ಧರಾಮ ಸ್ವಾಮಿಗಳು. ಅವರ ಆಪ್ತರಾಗಿ ಧರ್ಮ ಅನುರಾಗಕರಾಗಿ, ಧರ್ಮಿಷ್ಟರಾಗಿ ನಡೆದು, ಆಜ್ಞಾಧಾರಕರಾಗಿ ಶ್ರೀಗಳ ಪ್ರೀತಿ ಪಾತ್ರರಾಗಿ ಜ್ಞಾನವಂತರಾದ ಚನ್ನಯ್ಯನವರು ದಕ್ಷತೆಯ ಪ್ರತಿರೂಪದಂತಿದ್ದು, ಹಿರಿಯ ಮೃದು ಮನಸ್ಸಿನ, ಮಗುವಿನ ನಗೆಕಾರ ಹಿರಿಯ ಜೀವ ಎಂಟು ದಶಕಗಳ ಸವಿಯುಂಡ ಬಸವ ತತ್ವಗಾರರಾದ ಶ್ರೀ ಚನ್ನಯ್ಯ ಹಿರೇಮಠರಿಗೆ 81ನೇ ಜನ್ಮದಿನವಿಂದು.

ಬಸವಣ್ಣನವರು ಹೇಳಿದಂತೆ ಸ್ವರ್ಗ ಬೇರೆಲ್ಲೂ ಇಲ್ಲ, ಎಲ್ಲವೂ ಇಲ್ಲಿಯೇ ಇದೆ, ಸತ್ಯವನ್ನು ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದು ಮೃತ್ಯುಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ... ಈ ಅರ್ಥಗರ್ಭಿತ ವಚನಕ್ಕೆ ನಮ್ಮ ಈ ಜೀವನದಲ್ಲಿಯೇ ಈ ಭುವಿಯಲ್ಲಿ ನೆಲೆಸಿದ ಪ್ರತಿಯೊಂದು ಜೀವಿಗೂ ಸ್ವರ್ಗ ಸರಕಗಳ ಧರುಶನ ಇದೆ, ನಾವು ಸನ್ಮಾರ್ಗದ ಹಾದಿಯಲ್ಲಿ ಧರ್ಮದಿಂದ ನಡೆದು ನಮ್ಮ ತನುವಿಗೆ ಅನ್ನ, ಮನಕ್ಕೆ ಜ್ಞಾನ, ಆತ್ಮಕ್ಕೆ ದಾನದೊಂದಿಗೆ ಜೀವನ ನಡೆಸಿದರೆ ಈ ಜೀವನ ಸಾರ್ಥಕ. ಈ ಎಲ್ಲ ಗುಣಗಳು ಈ ಮೇಲಿನ ಮಾತುಗಳಿಗೆ ಅಕ್ಷರಶಃ ಪಾಲಿಸುವ ನಮ್ಮಯ ಹೆಮ್ಮೆಯ ಚನ್ನಯ್ಯ ಹಿರೇಮಠರವರು.

ಬಹಿರಂಗ ಪರಿಗ್ರಹಗಳ ಜೊತೆಗೆ ಅಂತರಂಗದ ಪರಿಗ್ರಹಗಳನ್ನು ತೊರೆದಾಗ ಮಾತ್ರ ಕಲ್ಯಾಣ ಸಾಧ್ಯ. ಆ ಸಾಧಕರಲ್ಲಿ ಸಾದನೆಗೈದು ತಮ್ಮ ತನು-ಮನ-ಧನವನ್ನು ತೇಜಿಸಿ ನಮ್ಮ ನಾಡು, ನುಡಿ, ನೆಲ, ಜಲ, ಭಾಷೆಯಲ್ಲಿ ಮಿಂದು, ಸಮಾಜಮುಖಿಯಾಗಿ ಬದುಕು ಕಾಣುವ ಸರಳವಾಗಿ ಬದುಕಿ ತೋರಿಸಿದವರು ಚೆನ್ನಯ್ಯ ಹಿರೇಮಠರವರು. ಅದು ಇಂದು ನಾವು ನೋಡುವ ನಮ್ಮ ಅಚ್ಚುಮೆಚ್ಚಿನ ಧರ್ಮೋಪಾಸಕ ಚೆನ್ನಯ್ಯನವರು.

ಒಂದು ದಿನ ನಾನು ನನ್ನ ಶ್ರೀ ಕಲ್ಮೇಶ್ವರ ಬೆರಳಚ್ಚು ಮತ್ತು ಗಣಕಯಂತ್ರ ವಿದ್ಯಾಲಯದಲ್ಲಿ ಕರ್ತವ್ಯದಲ್ಲಿದ್ದಾಗ ಭೇಟಿ ಕೊಟ್ಟರು. ನಾನು ವಿದ್ಯಾರ್ಥಿಗಳ ಪಾಲಕರು ಎಂದು 'ಬನ್ನಿ ಸರ್ ಬನ್ನಿ ಒಳಗೆ ಬನ್ನಿ.. ನಮ್ಮಲ್ಲಿ ಬೆರಳಚ್ಚು ಮತ್ತು ಗಣಕಯಂತ್ರ ತರಬೇತಿ ಕೊಡುತ್ತೇವೆ, ನಿಮ್ಮ ಮಕ್ಕಳಿಗೆ ಯಾವ ವಿಷಯದಲ್ಲಿ ತರಬೇತಿ ಬೇಕು, ಹೇಳಿ..' ಎಂದು ಹೇಳಿದಾಗ ಚೆನ್ನಯ್ಯನವರು, 'ನಾನು ನನ್ನ ಮಗನಿಗೆ ಬೆರಳಚ್ಚು ಕಲಿಸಬೇಕು, ಹಾಗೆಯೇ, ನಾನು ಏನನ್ನು ಕೇಳದೆ ವಿದ್ಯಾಲಯದ ಹೊರಗೆ ಬರಬೇಕಾದರೆ ನನಗೆ ಆಧರವಾಗಿ ಗೌರವದಿಂದ ಒಳಗೆ ಬನ್ನಿ ಕುಳಿತುಕೊಳ್ಳಿ ಎಂದು ಗೌರವಿಸಿದ ರೀತಿಗೆ ನಾನು ಧನ್ಯನಾದೆ, ಪಾಲಕರು ಇರಲಿ ಯಾರೇ ಇರಲಿ ಗೌರವಿಸುವ ರೀತಿ ನನಗೆ ಮೆಚ್ಚುಗೆಯಾಯಿತು' ಎಂದು ಹೇಳಿ ಹೊರಟು ಹೋದರು. ಮರುದಿನವೇ ಮಗನಿಗೆ ಪ್ರವೇಶ ಪಡೆದರು.

ಮಕ್ಕಳ ಭವಿಷ್ಯವನ್ನು ರೂಪಿಸಬೇಕಾದರೆ ಪಾಲಕರು ನಾವು ಮತ್ತು ಕೈಹಿಡಿದು

ನಡೆಸಬಲ್ಲ ಶಿಕ್ಷಕ ವರ್ಗ ಹೇಗಿರಬೇಕು 'ನಾವೆಲ್ಲರೂ ಹಸುಗೂಸಿನಂತಾಗಬೇಕು, ನಿರ್ಮಲತೆಯ, ಬಿಳಿಶುದ್ಧ ವಸ್ತ್ರದಂತೆ ನಮ್ಮ ಮನಸ್ಸು, ಕೆಲಸ, ಶ್ರದ್ಧೆಯೊಂದಿದ್ದರೆ ಮಗುವಿನ ನಿರ್ಮಲ ಭವಿಷ್ಯ ರೂಪಿಸಲು ಸಾಧ್ಯ. ನಮಗೆ ಸರಳತೆ, ಮಕ್ಕಳ ಮುಗ್ಧತೆ, ನಿಷ್ಕಪಟತೆ ಹಾಗೂ ನಿರ್ಮತ್ಸರತೆ ಬೆರೆತ ಮನಸ್ಸುಗಳು ಪ್ರಫುಲ್ಲತೆಯ ಸಂಕೇತವಾಗಿರುತ್ತದೆ. ಮಕ್ಕಳು ಪ್ರೀತಿ, ವಾತ್ಸಲ್ಯದ ಆಗರವಾಗಿ, ನಿರ್ಮಲ ಮನಸ್ಸಿನ ಆನಂದವನ್ನು ಎಲ್ಲೆಡೆಗೂ ಪಸರಿಸುವ ಶಕ್ತಿ ಮಕ್ಕಳ ದೇಹದ ರಕ್ತದ ಕಣಕಣಗಳಲ್ಲಿಯು ಅಡಗಿದೆ. ಈ ಮಕ್ಕಳು ದೊಡ್ಡವರಾದ ಮೇಲೂ ಈ ಗುಣಗಳನ್ನು ಕಾಪಾಡಿಕೊಂಡರೆ ನಿಜವಾಗಿಯೂ ದೊಡ್ಡ ಮನುಷ್ಯರಾಗಬಲ್ಲರು. ನಮ್ಮ ಮಕ್ಕಳ ಭವಿಷ್ಯಕ್ಕಾಗಿ ನಾವು ಹೆತ್ತವರಾಗಿದ್ದರು, ಶಿಕ್ಷಕರಾಗಿದ್ದರು 'ಮಗುವಾಗಿ' ಬೆರೆತಾಗ ನಿರ್ಮಲ ಮನಸ್ಸಿನ ಮಕ್ಕಳ ನಮ್ಮೊಂದಿಗೆ ಮಗುವಾಗಿ ದೇವತೆಯ ರೂಪದಲ್ಲಿ ಕಾಣುತ್ತಾರೆ. ಅಂತಹ ಮಕ್ಕಳನ್ನು ಬೆಳೆಸಿದ ಕೀರ್ತಿ ನಮ್ಮ ಚನ್ನಯ್ಯ ಹಿರೇಮಠರವರಿಗೆ ಸಲ್ಲುತ್ತದೆ.

'ರಾಮನೂ ಇರಲಿ, ರಹೀಮನೂ ಇರಲಿ,
ಏಸುವೂ ಇರಲಿ, ಬಸವನೂ ಇರಲಿ,
ಬುದ್ಧನೂ ಇರಲಿ, ಮಹಾವೀರನೂ ಇರಲಿ,
ಸರ್ವರೂ ನನ್ನ ಹೃದಯ ಮಂದಿರದಲ್ಲಿರಲಿ'

ನಮ್ಮ ಜೀವನದ ಹೊಸಕ್ಷಣವು ಹರುಷದಿ ತೇಲಿ ಮನ ಅರಳಿದಾಗ, 'ತುಪ್ಪದ ದೀಪವ ಹಚ್ಚಿ ಮನಮಂದಿರದಲ್ಲಿ ಕೈಮುಗಿದೇವು ಓ ದೇವರೆ ಅನುದಿನ, ಅನುಕ್ಷಣ ಉಲ್ಲಾಸ, ಸಂತೋಷ, ಯಶಸ್ಸು ದಯಪಾಲಿಸು, ಎಲ್ಲರನ್ನು ರಕ್ಷಿಸು' ಎಂದು ಕೈಮುಗಿದು ಬೇಡುವ ಮನಗಳು ಇಂದು ಬೇಕು. ನಮ್ಮವರಿಗೆ ನನ್ನವರಿಗೆ ಬಸವ ಬಲ್ಲಿದರಿಗೆ ಸಮನಾಗಿ ಕಾಣುವ ಹೃದಯವಂತರು ಅಭಿಮಾನದ ವ್ಯಕ್ತಿತ್ವದ, ನಿಂತರೆ ಬಸವ, ಕುಳಿತುಕೊಂಡರೆ ಬಸವ, ನುಡಿಯಲ್ಲಿ ಬಸವ, ತನುಮನದಲ್ಲಿ ಬಸವ, ರಕ್ತದ ಕಣಕಣಗಳಲ್ಲೂ ಬಸವನನ್ನು ನೆನೆವ ಗುಣವಂತರು ನಮ್ಮ ಚನ್ನಯ್ಯ ಹಿರೇಮಠರವರು. ಇನ್ನು ಇವರ ವ್ಯಕ್ತಿತ್ವದ ಬಗ್ಗೆ ಹೇಳುವುದಾದರೆ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತಿದ್ದು, ಶ್ರೀಗಳ ಮೊದಲ ಅಭಯ ಪಡೆದ ಪುಣ್ಯದಾತರು. ಈಗಿನ ತೋಂಟದಾರ್ಯ ಕಾಲೇಜನ್ನು ದೇಣಿಗೆ ನೀಡಿದ ಶ್ರೀಗಳ ಒಡನಾಡಿ, ಲಿಂಗೈಕ್ಯ ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಗುರುಬಸವ ಮಹಾ ಸ್ವಾಮಿಗಳು, ಲಿಂಗೈಕ್ಕೆ ಶ್ರೀಮನ್ ನಿರಂಜನ ಜಗದ್ಗುರು ಶಿವಕುಮಾರ ಮಹಾ ಸ್ವಾಮಿಗಳು, ಲಿಂಗೈಕ್ಯ ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಸಿದ್ದಲಿಂಗ ಸ್ವಾಮಿಜಿಗಳು, ಶ್ರೀಮನ್ ನಿರಂಜನ ಜಗದ್ಗುರು ಪೂಜ್ಯ ಶ್ರೀ ತೋಂಟದ ಶಿದ್ಧರಾಮ ಸ್ವಾಮಿಗಳು. ಅವರ ಆಪ್ತರಾಗಿ ಧರ್ಮ ಅನುರಾಗಕರಾಗಿ, ಧರ್ಮಿಷ್ಟರಾಗಿ ನಡೆದು ಆಜ್ಞಾಧಾರಕರಾಗಿ ಶ್ರೀಗಳ ಪ್ರೀತಿ ಪಾತ್ರರಾಗಿ ಆಘಾದ ಜ್ಞಾನವಂತರಾದ ಚನ್ನಯ್ಯನವರು ಒಂದು ಜ್ಞಾನದ ಭಂಡಾರ.

ಚೆನ್ನಯ್ಯ ಹಿರೇಮಠರು 80ರ ವಯಸ್ಸಿನಲ್ಲೂ ಆರೋಗ್ಯದಾತರು, ನಾಡಿನ ಎಲ್ಲ ಮಠಾಧೀಶರ ಅಭಯದಿಂದ ಇಂದು 80ರ ಚಿರಯೌವ್ವನದಲ್ಲೂ ಉತ್ಸಾಹ ಕಡಿಮೆ ಆಗಿಲ್ಲ. ಅವರ ಮಾರ್ಗದರ್ಶನ ಬಯಸುತ್ತ,ನೂರು ವರ್ಷ ಆರೋಗ್ಯಕರವಾಗಿ ಸುಖಕರವಾಗಿರಲಿ, ಆರೋಗ್ಯದಾಯಕ ಜೀವನ ಸಮೃದ್ಧಿದಾಯಕವಾಗಲಿ, ನೂರಾರು ವರ್ಷ ಬಾಳಲಿ, ಇವರ ಸಹ ಕುಟುಂಬ ನಗು ಸಂತೋಷದ ಅಲೆಯಲ್ಲಿ ತೇಲಲಿ, ದೇವರು ಅನುಗ್ರಹ ಪ್ರತಿಕ್ಷಣ ಪ್ರತಿಕ್ಷಣವೂ ಕರುಣಿಸಲಿ ಎಂದು ನಾನು ಅವರ ಗೆಳೆಯರ ಬಳಗ, ಹಿತೈಷಿಗಳು, ಅವರ ಮನೆಯ ಸುತ್ತಲಿನ ಜನರು, ಭಕ್ತರು, ಸಮಾಜ, ಮೇಲಾಗಿ ಪೂಜ್ಯ ಶ್ರೀ ತೋಂಟದ ಸಿದ್ಧರಾಮ ಸ್ವಾಮಿಜಿಗಳ ಅಖಂಡ ಆಶಿರ್ವಾದ ಸದಾ ಇರಲಿ ಎಂದು ಆ ಭಗವಂತನು ಅವರ ಜೀವನ ಹೂವಿನ ಹಾಸಿಗೆಯಂತಿರಲಿ ಎಂದು ಮಗದೊಮ್ಮೆ ಆ ದೇವರಲ್ಲಿ ಬೇಡುತ್ತೇನೆ.

– ಡಾ. ತಯಬಅಲಿ ಅ.ಹೊಂಬಳ.
ಮಕ್ಕಳ ಸಾಹಿತಿ, ಗದಗ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಡಾ.ಕೆ. ಪ್ರಕಾಶ್ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕ ರಾಜ್ಯ ಸಿಪಿಐ (ಎಂ) ಕಾರ್ಯದರ್ಶಿಯಾಗಿ ಹಿರಿಯ ಕಾರ್ಮಿಕ ಮುಖಂಡ ಡಾ.ಕೆ. ಪ್ರಕಾಶ್ ಮಂಗಳವಾರ ಆಯ್ಕೆಯಾಗಿದ್ದಾರೆ. ಕಳೆದ ಮೂರು ದಿನಗಳಿಂದ ತುಮಕೂರಿನಲ್ಲಿ ನಡೆಯುತ್ತಿರುವ ಪಕ್ಷದ 24 ನೇ ರಾಜ್ಯ ಸಮ್ಮೇಳನದಲ್ಲಿ 35 ಜನರ ನೂತನ ರಾಜ್ಯ ಸಮಿತಿಯನ್ನು ಚುನಾಯಿಸಲಾಗಿದ್ದು, ಈ ಸಮಿತಿಯು 12 ಜನರ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಿದೆ.

ನೂತನ ರಾಜ್ಯ ಕಾರ್ಯದರ್ಶಿ ಡಾ.ಕೆ. ಪ್ರಕಾಶ್ ಅವರು ಈ ಹಿಂದೆ ಕೆಎಸ್‌ಆರ್‌ಟಿಸಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಹಲವಾರು ಹೋರಾಟಗಳನ್ನು ಸಂಘಟಿಸಿದ್ದರು.

ವಿಶ್ವಪಥದತ್ತ ಮುನ್ನಡೆಸಿದ ಕವಿ ಕುವೆಂಪು

■ ವಿಜಯಸಾಕ್ಷಿ ಸುದ್ದಿ, ಗದಗ

20ನೇ ಶತಮಾನ ಕಂಡ ದೈತ್ಯ ಪ್ರತಿಭೆ, ವರಕವಿ ಬೇಂದ್ರೆಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡು ವಿಶ್ವಮಾನವ ಸಂದೇಶವನ್ನು ನೀಡಿ ಕನ್ನಡ ಸಾಹಿತ್ಯಕ್ಕೆ ಕಳಸಪ್ರಾಯದ ರೀತಿಯಲ್ಲಿ ಕೊಡುಗೆ ನೀಡಿದವರು ಕುವೆಂಪು. ಮಲೆನಾಡಿನ ರಮ್ಯ ಪರಿಸರದಲ್ಲಿ ಜನ್ಮತಾಳಿದರೂ ಜನಪರ ಕಾಳಜಿಯ ಬರಹಗಾರರಾಗಿ ಗೋಚರಿಸುತ್ತಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿವೇಕಾನಂದಗೌಡ ಪಾಟೀಲ ತಿಳಿಸಿದರು.

ಅವರು ಜಿಲ್ಲಾ ಕಸಾಪದಿಂದ ರಾಷ್ಟ್ರಕವಿ ಕುವೆಂಪು ಜನ್ಮದಿನೋತ್ಸವ ಹಾಗೂ ವಿಶ್ವಮಾನವ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಹುಟ್ಟತ್ತಲೇ ವಿಶ್ವಮಾನ್ಯತೆಯನ್ನು ಪಡೆದ ಮಗು ಬೆಳೆಯುತ್ತಾ ಅನೇಕ ಸಂಕೋಲೆಗಳನ್ನು ತಾಕಿಸಿಕೊಂಡು

ಅಲ್ಪ ಮಾನವನಾಗುತ್ತದೆ. ಮತ್ತೆ ವಿಶ್ವಮಾನವನಾಗುವತ್ತ ನಮ್ಮ ಪಯಣ ಸಾಗಬೇಕು ಎಂಬ ಆಶಯವನ್ನು ಹೊತ್ತು ಸಾಹಿತ್ಯ ಸೃಷ್ಟಿಸಿದ್ದಾರೆ. ಅವರು ರೂಪಿಸಿದ ಮನುಜಮತ ವಿಶ್ವ ಪಥದ ಕಲ್ಪನೆ ದೇಶ, ಭಾಷೆಯನ್ನು ಮೀರಿದ್ದಾಗಿದೆ. ಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ ಹೀಗೆ ವಿವಿಧ ಆಯಾಮಗಳಲ್ಲಿ ಮಹತ್ವದ ಕೃತಿಗಳನ್ನು ರಚಿಸಿ ಜನಮಾನಸವನ್ನು ತಿದ್ದಿ ತೀಡುವ ಕಾರ್ಯವನ್ನು ಬರೆಹದ ಮೂಲಕ ಮಾಡಿದ್ದಾರೆ ಎಂದು ತಿಳಿಸಿದರು.

ಶರಣೆ ರತ್ನಕ್ಕ ಪಾಟೀಲ ಮಾತನಾಡಿ, ಮೂಢನಂಬಿಕೆಗಳನ್ನು ದೇವರ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ವಿರೋಧಿಸಿ ತಮ್ಮ ಬರಹದಲ್ಲಿ ತೋರ್ಪಡಿಸಿದರು. ಶುದ್ಧವಾದ ಆಧ್ಯಾತ್ಮದ ಬದುಕನ್ನು ಬದುಕಿದರು, ಸತ್ಯ ಪ್ರತಿಪಾದಕಾರಗಿದ್ದರು. ಮನುಷ್ಯ ಜಾತಿ ತಾನೊಂದೆ ವಲಂ ಎನ್ನುವಂತೆ ವಿಶ್ವಮಾನವ ಪ್ರಜ್ಞೆಯನ್ನು ತಂದರು ಎಂದು ನುಡಿದರು. ವೇದಿಕೆ ಮೇಲೆ ಸಾಹಿತಿ ಬಿ.ಎಲ್. ಪತ್ತಾರ, ಸಿ.ಎಂ. ಪತ್ತಾರ, ಆನಂದ ಹಡಪದ ಉಪಸ್ಥಿತರಿದ್ದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಿ.ಎಸ್. ಬಾಪುರಿ ವಂದಿಸಿದರು.

ಕ್ರೀಡೆ ಶಿಕ್ಷಣದ ಭಾಗವಾಗಲಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ನೆಲೆಗೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಕ್ರೀಡೆಗಳು ಪಠ್ಯಕ್ಕೆ ಪೂರಕವಾಗಿದ್ದು, ಶಾಲಾ ಹಂತದಲ್ಲಿ ಮಕ್ಕಳಿಗೆ ಕ್ರೀಡೆ ಶಿಕ್ಷಣದ ಭಾಗವಾಗಿಸಬೇಕು ಎಂದು ಬಿಸಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಲೋಹಿತ್ ನೆಲವಗಿ ಹೇಳಿದರು.

ಪಟ್ಟಣದ ಬಿಸಿಎನ್ ವಿದ್ಯಾಸಂಸ್ಥೆಯ ಬಿಸಿಎನ್ ಸ್ಪೆಕ್ಟಮ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ಕ್ರೀಡಾಕೂಟಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕ್ರೀಡಾಕೂಟಗಳು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ, ಪರಸ್ಪರ ಸ್ನೇಹ, ಸೌಹಾರ್ದತೆ, ನಾಯಕತ್ವದ ಮನೋಭಾವ ಬೆಳೆಸುವ ಜತೆಗೆ ದೈಹಿಕ-ಮಾನಸಿಕ ಚೈತನ್ಯಶಕ್ತಿಯನ್ನು

ನೀಡುತ್ತವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಕ್ರೀಡಾಕೂಟದಲ್ಲಿ ಭಾಗವಹಿಸಿ ಜಿಲ್ಲಾ, ರಾಜ್ಯ, ರಾಷ್ಟ್ರ ಮತ್ತು ಅಂತಾಷ್ಟ್ರೀಯ ಕ್ರೀಡಾಪಟುಗಳಾಗಿ ಬೆಳೆಯಬೇಕು ಎಂದರು.

ಶಾಸಕ ಡಾ. ಚಂದ್ರು ಲಮಾಣಿ, ಪಿಎಸ್‌ಐ ನಾಗರಾಜ್ ಗಡಾದ ಮಾತನಾಡಿದರು. ಕ್ರೀಡಾಕೂಟದಲ್ಲಿ ಕುಬ್ಬರ ಕ್ರೀಡಾಕೂಟದ ಅಂತಾರಾಷ್ಟ್ರೀಯ ಕ್ರೀಡಾಪಟು ಕಲಘಟಗಿಯ ದೇವಪ್ಪ ಮೊರೆ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಶಾಂತ ನೆಲವಿಗಿ, ನಾಗರಾಜ್ ಕುಲಕರ್ಣಿ, ನಾಗರಾಜ ಯಂಡಿಗೇರಿ, ವಿರೇಶಕುಮಾರ್, ಭುವನೇಶ್ವರಿ ಕೋಷ್ಠಿ ಸೇರಿ ಶಿಕ್ಷಕರು, ಸಿಬ್ಬಂದಿಗಳು ಇದ್ದರು.

ಅಗಡಿ ಇಂಜಿನಿಯರಿಂಗ್ ಕಾಲೇಜಿನ 21ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಕುಂದ್ ಗಲಗಲಿ

ಬದ್ಧತೆಯೊಂದಿಗೆ ಜ್ಞಾನ ಸಂಪತ್ತು ಗಳಿಸಬೇಕು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶೈಕ್ಷಣಿಕ ಜ್ಞಾನ ಮನುಷ್ಯನ ಮೂರನೇ ಕಣ್ಣಾಗಿದ್ದು, ಉನ್ನತ ಗುರಿ ಸಾಧನೆಗಾಗಿ ವಿದ್ಯಾರ್ಥಿ ದಿಸೆಯಲ್ಲಿಯೇ ಸತತಾಭ್ಯಾಸ, ಶಿಸ್ತು, ಬದ್ಧತೆಯೊಂದಿಗೆ ಜ್ಞಾನ ಸಂಪತ್ತು ಗಳಿಸಬೇಕು ಎಂದು ಮುಂಬೈನ ಝೀ ಎಂಟರ್‌ಟೈನ್ಮೆಂಟ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಮುಕುಂದ್ ಗಲಗಲಿ ಹೇಳಿದರು.

ಅವರು ಪಟ್ಟಣದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ.ಅಗಡಿ ಇಂಜಿನಿಯರಿಂಗ್ ಕಾಲೇಜಿನ 21ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ದೇಶದ ಅಭಿವೃದ್ಧಿಯಲ್ಲಿ ಪ್ರತಿಭಾನ್ವಿತ, ಕೌ

ಕವನ

ಬೆಳಗು

ಬೆಳಗು ಬಾ ಬೆಳಕು
ಬೆಳದಿಂಗಳ ಬೆಳಕು ಚೆಲ್ಲುತ
ರಂಗು ರಂಗಿನ ಕಾಮನಬಿಲ್ಲಿನಂತೆ
ಮಿನು ಮಿನುಗುವ ಬೆಳ್ಳಿಚುಕ್ಕಿಯಂತೆ
ರಂಗು ರಂಗಿನ ರಂಗೋಲಿಯಂತೆ
ನೆನಪಿನಂಗಳದಿ ನಗು ನಗುತ
ನೀ ಬೆಳಗು ಬಾ ಬೆಳಕು...
ಈ ಬಾಳ್ ಕತ್ತಲೆಯ ಬದುಕು
ಹೊಸ ಜ್ಯೋತಿಯ ಹೊಂಬೆಳಕಲಿ
ಸೂರ್ಯನ ಬೆಳಕು ಚೆಲ್ಲುತ
ದ್ಯಿವ ಜ್ಯೋತಿಯ ಉದಯಿಸುತ
ಬೆಳಗು ಬಾ ಬೆಳಕು...

– ವಿ.ಎಂ.ಎಸ್. ಗೋಪಿ.
ಸಾಹಿತಿಗಳು, ಬೆಂಗಳೂರು.

ಲಕ್ಷ್ಮೀನಾರಾಯಣ ಸಹಕಾರಿ ಸಂಘದ ದಿನದರ್ಶಿಕೆ ಬಿಡುಗಡೆಗೊಳಿಸಿದ ಡಾ. ಕೊಟ್ಟೂರೇಶ್ವರ ಶ್ರೀ

ಸದಸ್ಯರು ಜವಾಬ್ದಾರಿಯಿಂದ ವ್ಯವಹರಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಸರಕಾರಿ ಉದ್ಯೋಗವೇ ಬೇಕು ಎಂದು ನಿರುದ್ಯೋಗಿಗಳಾಗಿರದೇ ಸೌಹಾರ್ದ ಸಹಕಾರಿ ಸಂಘವನ್ನು ಸ್ಥಾಪಿಸಿ ಉದ್ಯೋಗವನ್ನು ಕಂಡುಕೊಂಡ ಯುವಕರ ಕಾರ್ಯ ಶ್ಲಾಘನೀಯ ಎಂದು ಹರ್ಲಾಪೂರ ಕೊಟ್ಟೂರೇಶ್ವರ ಮಠದ ಡಾ. ಕೊಟ್ಟೂರೇಶ್ವರ ಸ್ವಾಮಿಗಳು ಅಭಿಪ್ರಾಯಪಟ್ಟರು.

ಇಲ್ಲಿಯ ಲಕ್ಷ್ಮೀ ನಾರಾಯಣ ಪತ್ತಿನ ಸೌಹಾರ್ದ ಸಹಕಾರಿ ಸಂಘವು ಹೊರ ತಂದ 2025ರ ದಿನ ದರ್ಶಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಈ ಸಂಘವನ್ನು ರಚನೆ ಮಾಡಿದವರು ಯುವಕರೇ ಇದ್ದು, ನಾಲ್ಕಾರು ಯುವಕರಿಗೆ ಉದ್ಯೋಗವನ್ನು ನೀಡಿದ್ದು ಮೆಚ್ಚಲೇಬೇಕಾಗಿದೆ. ಈ ದಿಸೆಯಲ್ಲಿ ಗ್ರಾಮಸ್ಥರು ತಾವು ದುಡಿದ ಹಣವನ್ನು ದುಶ್ಚಟಕ್ಕೆ ವಿನಿಯೋಗಿಸದೇ ಕೂಡಿಟ್ಟ ಹಣವನ್ನು ಇಂತಹ ಸಂಘದಲ್ಲಿ ಠೇವಣಿ ಇಟ್ಟು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಲಿಂಗ ಪೂಜೆ ಮಾಡಿದ ಸ್ವಾಮಿಗಳ ಕೈ ಎಷ್ಟು ಪವಿತ್ರವೋ ಹಾಗೆಯೇ ನ್ಯಾಯ, ನೀತಿ, ಧರ್ಮದಿಂದ ಈ ಸಂಘವನ್ನು ಮುನ್ನಡೆಸಿಕೊಂಡು ಪವಿತ್ರವಾಗಬೇಕು. ಸಾಲ ಕೊಡುವವರು ಮತ್ತು ತೆಗೆದುಕೊಳ್ಳುವವರು ಜವಾಬ್ದಾರಿಯುತವಾಗಿ ವ್ಯವಹರಿಸಬೇಕು

ಎಂದು ಸಲಹೆ ನೀಡಿದರು.

ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಮಾತನಾಡಿ, ಸಂಘವು ಸಾಲವನ್ನು ನೀಡುವಲ್ಲಿ ಕಾನೂನಿನ ಅಡಿಯಲ್ಲಿ ಎಲ್ಲರನ್ನು ಸಮಾನವಾಗಿ ಕಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕಲಿ ಎಂದು ಹಾರೈಸಿದರು.

ನಿವೃತ್ತ ಯೋಧ ದತ್ತಣ್ಣ ಜೋಶಿ ಮಾತನಾಡಿ, ಸರ್ವರ ಪಾಲುಗಾರಿಕೆಯಿಂದ ಈ ಸಂಘವು ರಚನೆಯಾಗಿದ್ದು, ಇಲ್ಲಿ ಕೇವಲ ಹಣಕಾಸು ವ್ಯವಹಾರಕ್ಕಿಂತ ಆತ್ಮಿಯತೆ ಮತ್ತು ಸದ್ಭಳಕೆಗೆ ಪ್ರಾಮುಖ್ಯತೆ ಇರಲಿ. ಬಂದ ಲಾಭದಲ್ಲಿ ಸಾಮಾಜಿಕ ಸೇವೆಗೂ ಸಹ ವಿನಿಯೋಗಿಸಬೇಕಾಗಿದೆ. ಈ ನಿಟ್ಟಿನಲ್ಲಿ ಉಚಿತವಾಗಿ ನೂತನ ವರ್ಷದ ದಿನ ದರ್ಶಿಕೆಯನ್ನು ಹೊರ ತಂದಿದ್ದು ಸಂತಸ ತಂದಿದೆ. ನಮ್ಮ ಜೀವನದ ಅವಿಭಾಜ್ಯ ಅಂಗವಾಗಿರುವ ದಿನದರ್ಶಿಕೆಯು ನಮ್ಮ ಭಾರತೀಯ ಸಂಸ್ಕೃತಿಗೆ ಅತ್ಯವಶ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಬಸವರಾಜ ಮುಳ್ಳಾಳ ಮಾತನಾಡಿ, ಗ್ರಾಮದ ಎಲ್ಲರೂ ಸಹಾಯ, ಸಹಕಾರ, ಮಾರ್ಗದರ್ಶನ ನೀಡಿ ಸಂಘವನ್ನು ಅಭಿವೃದ್ಧಿಪಡಿಸಬೇಕು ಎಂದು ವಿನಂತಿಸಿಕೊಂಡರು.

> ಯುವಕರೇ ಹುಟ್ಟು ಹಾಕಿರುವ ಸಹಕಾರ ಸಂಘಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸರಕಾರದಿಂದ ದೊರೆಯುವ ಸಹಾಯ – ಸೌಲಭ್ಯವನ್ನು ಒದಗಿಸಿ ಅಭಿವೃದ್ಧಿಯಾಗಲು ಪ್ರೋತ್ಸಾಹಿಸಲಾಗುವುದು
>
> – ಗಂಗಪ್ಪ ಎಂ.
> ಉಪವಿಭಾಗಾಧಿಕಾರಿಗಳು, ಗದಗ.

ಅಲ್ಲಮಪ್ರಭುದೇವರ ಮಠದ ಸಿದ್ದಲಿಂಗೇಶ್ವರ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಉಪವಿಭಾಗಾಧಿಕಾರಿ ಎಂ.ಗಂಗಪ್ಪ, ಜಿಲ್ಲಾ ಉಪ ಪೊಲೀಸ್ ವರಿಷ್ಠಾಧಿಕಾರಿ ಎಚ್. ಎನ್. ಇನಾಮದಾರ. ಗ್ರಾ.ಪಂ ಸದಸ್ಯರಾದ ಸಿದ್ದು ಮುಳಗುಂದ, ಮಹಾಂತೇಶ ಕಮತರ, ವೀರಯ್ಯ ನಡುವಿನಮಠ, ಚನ್ನಪ್ಪ ಹುಬ್ಬಳ್ಳಿ, ಕಳಕಪ್ಪ ಟೆಂಗಿನಕಾಯಿ, ನಿಂಗಪ್ಪ ಗುಂಜಳ, ಐ.ಎಸ್. ಮಟ್ಟಿ, ಪಿ.ಡಿ.ಓ ರಾಜಕುಮಾರ ಭಜಂತ್ರಿ, ಗ್ರಾ.ಪಂ ಕಾರ್ಯದರ್ಶಿ ಪ್ರದೀಪ ನವಲಗುಂದ, ತುಕಾರಾಮ ಹುಲಗಣ್ಣವರ, ವೀರಣ್ಣ ಅರಹುಣಶಿ, ವಿನಾಯಕ ಡಿಗ್ಗಾವಿ ಉಪಸ್ಥಿತರಿದ್ದರು.

ಪ್ರವಿಣ ಕಲಾಲ ಸ್ವಾಗತಿಸಿದರು. ವಿರುಪಾಕ್ಷಪ್ಪ ಬೆಟಗೇರಿ ನಿರೂಪಿಸಿದರು. ಬಸವರಾಜ ಕವಲೂರ ವಂದಿಸಿದರು.

ಕಳಸಾಪೂರ ಹುಡ್ಕೋ ನಿವಾಸಿಗಳ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕಳಸಾಪೂರ ಹುಡ್ಕೋ ನಿವಾಸಿಗಳ ಸಂಘದ ಸಭೆಯು ಡಾ. ಆರ್.ಎಚ್. ಕಬಾಡಿಯವರ ನೇತೃತ್ವದಲ್ಲಿ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ ಡಾ. ಆರ್.ಎಚ್. ಕಬಾಡಿಯವರನ್ನು ಸಂಘದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಇದೇ ಸಂದರ್ಭದಲ್ಲಿ ಪೊಲೀಸ ಪಾಟೀಲರನ್ನು ಗೌರವ ಕಾರ್ಯದರ್ಶಿಯನ್ನಾಗಿ, ಎಲ್.ಟಿ. ರಾಯಬಾಗಿಯವರನ್ನು

ಕೋಶಾಧ್ಯಕ್ಷರನ್ನಾಗಿ, ಡಾ. ಆರ್.ಎಚ್. ಕಬಾಡಿಯವರು ಸೂಚಿಸಿದರು. ಸಭೆಯಲ್ಲಿ ಸುಮಾರು 22 ಜನ ಹೊಸ ಸದಸ್ಯರು ಸೇರ್ಪಡೆಗೊಂಡಿದ್ದು, ಅವರನ್ನು ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು.

ಇಲ್ಲಿಯವರೆಗೆ ಸಂಘವು ನಡೆದು ಬಂದ ದಾರಿಯ ಬಗ್ಗೆ ಡಾ. ಆರ್.ಎಚ್. ಕಬಾಡಿಯವರು ವಿವರಿಸಿದರು. ಪ್ರತಿ ತಿಂಗಳು 2ನೇ ಮತ್ತು 4ನೇ ರವಿವಾರ ನಿಗದಿತ ಸ್ಥಳದಲ್ಲಿ ಸರ್ವ ಸದಸ್ಯರ ಸಭೆಯನ್ನು ನಡೆಸುವಂತೆ ನಿರ್ಧರಿಸಲಾಯಿತು. ಮುಂದಿನ ಸಭೆಯು ಜನವರಿ 12ರಂದು ಬೆಳಗಿನ 10–30 ಗಂಟೆಗೆ ಇದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಪಾಲ್ಗೊಳ್ಳುವಂತೆ ಸಂಘದ ಕಾರ್ಯದರ್ಶಿ ಪೊಲೀಸಪಾಟೀಲರು ಇದೇ ಸಂದರ್ಭದಲ್ಲಿ ವಿನಂತಿಸಿದರು.

ವಿದ್ಯಾರ್ಥಿಗಳಿಗೆ ಟೈ, ಬೆಲ್ಟ್ ವಿತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮೀಪದ ಅಡವಿಸೋಮಾಪೂರ ಸಣ್ಣ ತಾಂಡೆಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗದುಗಿನ ಮೆ. ಜಯಂತಿ ಸ್ಟೇಷನರಿ ಮಾಲಿಕರಾದ ಪಂಕಜ ಬನ್ಸಾಲಿ, ನಿಕೇತನ ಬನ್ಸಾಲಿ ಇವರು ದಾನವಾಗಿ ನೀಡಿದ ಟೈ ಮತ್ತು ಬೆಲ್ಟ್‌ಗಳನ್ನು ವಿತರಿಸಲಾಯಿತು.

ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಮಾರುತಿ ಪವಾರ, ಸದಸ್ಯರಾದ ರಾಮಪ್ಪ ಲಮಾಣಿ, ರಮೇಶ್ ಲಮಾಣಿ, ಮುಖ್ಯ ಶಿಕ್ಷಕ ಮಲ್ಲೇಶ ಡಿ.ಎಚ್, ಶಿಕ್ಷಕರಾದ ಎಸ್.ಜಿ. ಅಮ್ಮಿನಭಾವಿ, ಪಿ.ಡಿ. ಕಿಲಬನವರ ದಾನಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಚಾಲನಾ ವೃತ್ತಿ ಪರೀಕ್ಷೆಗೆ ಅಂತಿಮ ಅವಕಾಶ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲನಾ ವೃತ್ತಿ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳಲ್ಲಿ ಪ್ರಥಮ ಹಂತವಾಗಿ ಚಾಲಕ–ಕಂ–ನಿರ್ವಾಹಕ (ಪಜಾ–ಹಿಂಬಾಕಿ) ಹಾಗೂ ಚಾಲಕ ಮತ್ತು ಚಾಲಕ–ಕಂ–ನಿರ್ವಾಹಕ (both) ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹುಮನಾಬಾದ್ ಪ್ರಾದೇಶಿಕ ತರಬೇತಿ ಕೇಂದ್ರ ಬೀದರ್–ಜಿಲ್ಲೆಯ ಚಾಲನಾ ಪಥದಲ್ಲಿ ದಿ. 14–12–2024 ರಿಂದ ಪ್ರಾರಂಭಿಸಲಾಗಿದ್ದು, ಸಂಸ್ಥೆಯ ವೆಬ್ ಸೈಟ್ ವಿಳಾಸ www.nwkrtc.karnataka.gov.in ನಲ್ಲಿ ತಮ್ಮ ಅರ್ಜಿ ಸಂಖ್ಯೆ/ಜನ್ಮ ದಿನಾಂಕವನ್ನು ನಮೂದಿಸಿ ಕರೆ ಪತ್ರವನ್ನು ಮುದ್ರಿಸಿಕೊಂಡು ನಿಗದಿತ ಸ್ಥಳ / ದಿನಾಂಕ / ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ತಿಳಿಸಲಾಗಿತ್ತು.

ಸದರಿ ನೇಮಕಾತಿ ಪ್ರಕ್ರಿಯೆಯು ದಿನಾಂಕ: 07–01–2025 ರವರೆಗೆ ಮಾತ್ರ ನಡೆಯಲಿದ್ದು, ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶ ನೀಡಿ ದಿ. 08–1–2025 ರಿಂದ 13–01–2025 ರವರೆಗೆ (ಭಾನುವಾರ ಹೊರತು ಪಡಿಸಿ) ಹಾಜರಾಗುವಂತೆ ತಿಳಿಸಲಾಗಿದೆ. ದಿ: 13–01–2025 ರ ನಂತರ ಚಾಲನಾ ವೃತ್ತಿ ಪರೀಕ್ಷೆಗೆ ಪುನ: ಯಾವುದೇ ಕಾರಣಕ್ಕೂ ಅವಕಾಶ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ದಿ: 27–12–2024 ರಂದು ಮಾಜಿ ಪ್ರಧಾನ ಮಂತ್ರಿಗಳಾದ ಡಾ. ಮನಮೋಹನ ಸಿಂಗ್, ಅವರ ನಿಧನದ ಹಿನ್ನೆಲೆಯಲ್ಲಿ ಸಾರ್ವಜನಿಕ ರಜೆ ಘೋಷಣೆ ಆಗಿದ್ದರಿಂದ ದಿ: 27–12–2024 ರಂದು ನಿಗದಿಯಾಗಿದ್ದ ಚಾಲನಾ ವೃತ್ತಿ ಪರೀಕ್ಷೆಯನ್ನು ಮುಂದೂಡಲಾಗಿದೆ. ಸದರಿ ಅಭ್ಯರ್ಥಿಗಳಿಗೆ ದಿ: 07–01–2025 ರಂದು ಚಾಲನಾ ವೃತ್ತಿ ಪರೀಕ್ಷೆಯನ್ನು ಮರು ನಿಗದಿಪಡಿಸಲಾಗಿದೆ.

ಅಭ್ಯರ್ಥಿಗಳು ತಪ್ಪದೇ ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗುವಂತೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರೈತ ಬಾಂಧವರಿಗೆ ಸಲಹೆ

■ ವಿಜಯಸಾಕ್ಷಿ ಸುದ್ದಿ, ಗದಗ

ರೈತರು ಕಟಾವು ಮಾಡಿದ ಕೃಷಿ ಉತ್ಪನ್ನಗಳನ್ನು ರಾತ್ರಿ ಇಬ್ಬನಿ/ ಮಂಜಿನಿಂದ ರಕ್ಷಿಸಲು ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚಲು ಸಲಹೆ ನೀಡಲಾಗಿದೆ.

ಜೋಳ ಮತ್ತು ಮೆಕ್ಕೆಜೋಳ ಬೆಳೆಗಳ ಬೆಳವಣಿಗೆ ಹಂತದಲ್ಲಿ ಸೈನಿಕ ಹುಳುವಿನ ನಿಯಂತ್ರಣಕ್ಕಾಗಿ, 2 ಗ್ರಾಂ ಇಮಾಮೆಕ್ಟಿನ ಬೆಂಝೋಯೇಟ ಅಥವಾ 4.0 ಮಿ. ಲೀ. ಫೈನೋಟೆರಾನ್ 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಮೊದಲೇ ಬಿತ್ತಿದ ತೆ–ಗರಿ ಬೆಳೆ ಕೊಯ್ಲು ಹಂತದಲ್ಲಿದ್ದು ಕಟಾವನ್ನು ಪೂರ್ಣಗೊಳಿಸಿ ಮತ್ತು ಬಿಸಿಲಿನಲ್ಲಿ ಒಣಗಿಸಬೇಕು. ಕಾಯಿಕೊರಕ (ಹೆಲಿಕೋವರ್ಪಾ) ನಿರ್ವಹಣೆಗಾಗಿ

ಕ್ಲೋರಂಟ್ರಾನಿಲಿಪ್ರೋಲ್ 0.15 ಮಿ. ಲೀ. ಅಥವಾ ಇಂಡಾಕ್ಸಿಕಾರ್ಬ 0.3 ಗ್ರಾಂ ಸಿಂಪಡಿಸಬೇಕು. ಕುಸುಬೆಯಲ್ಲಿ ಬೆಳವಣಿಗೆಯಿಂದ ಹೂವಾಡುವ ಹಂತದಲ್ಲಿ ರಸ ಹೀರುವ ಕೀಟದ ನಿರ್ವಹಣೆಗಾಗಿ 0.2 ಗ್ರಾಂ ಥೈಯಾಮಿಥಾಕ್ಸಾಮ್ 25 ಡಬ್ಲ್ಯೂ.ಜಿ. ಅಥವಾ 1.0 ಗ್ರಾಂ ಅಸಿಫೇಟ್ 75 ಎಸ್.ಪಿ. ಅಥವಾ 1.7 ಮಿ.ಲೀ. ಡೈಮಿಥೊಯೇಟ್ 30 ಇ.ಸಿ. ಪ್ರತಿ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಕಡಲೆಯಲ್ಲಿ 30–40 ದಿನದ ಬೆಳೆ ಇದ್ದಾಗ ಕುಡಿ ಚಿವುಟುವುದರಿಂದ ಇಳುವರಿ ಹೆಚ್ಚಲು ಅನುಕೂಲವಾಗುವುದು. ಪಲ್ಸ್ ಬೂಸ್ಟರ್ ನ್ನು ಶೇ. 25 ರಷ್ಟು ಹೂವಾಡುವ ಸಮಯದಲ್ಲಿ 10ಗ್ರಾಂ./ಲೀ ನಂತೆ ಬೆಳೆಗೆ ಸಿಂಪರಣೆ ಮಾಡಿದರೆ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ. ಪಲ್ಸ್ ಬೂಸ್ಟರ್ ಕೃಷಿ ವಿಶ್ವ ವಿದ್ಯಾಲಯ, ಧಾರವಾಡದಲ್ಲಿ ಲಭ್ಯವಿರುತ್ತದೆ.

ಪ್ರಸಕ್ತ ವರ್ಷ ಕಡಲೆ ಬೆಳೆಯಲ್ಲಿ ಸಿಡಿ ರೋಗದ ಪ್ರಮಾಣ ಸ್ವಲ್ಪ ಜಾಸ್ತಿ ಕಂಡು ಬಂದಿದೆ. ಮುಂಗಾರಿನಲ್ಲಿ ಹೆಸರು, ಶೇಂಗಾ ಬೆಳೆದ ಜಮೀನಿನಲ್ಲಿ ಹೆಚ್ಚಾಗಿ ಕಂಡು ಬಂದಿದ್ದು ರೈತರು ಬೆಳೆ ಪರಿವರ್ತನೆ (ಏಕದಳ–ದ್ವಿದಳ/ ದ್ವಿದಳ– ಏಕದಳ) ಮಾಡಿದಲ್ಲಿ ಹಾಗೂ ಬೀಜೋಪಚಾರ ಕೈಗೊಂಡಲ್ಲಿ ಸುಲಭವಾಗಿ ನಿರ್ವಹಣೆ ಮಾಡಬಹುದಾಗಿದೆ.

ಬೆಳೆಗಳ ನಿಯಮಿತ ಪರಿವೀಕ್ಷಣೆ ಕೈಗೊಂಡು, ಕಾಲಕಾಲಕ್ಕೆ ಬೇಕಾಗುವ ಸಸ್ಯ ಸಂರಕ್ಷಣಾ ಕ್ರಮಗಳನ್ನು ಹಾಗೂ ಬೆಳೆಗಳಿಗೆ ಬೇಕಾದ ಪೋಷಕಾಂಶ ನಿರ್ವಹಣೆಯನ್ನು ಕೈಗೊಳ್ಳಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃತಮರ ನೇಕಾರರ ಪತ್ತಿನ ಸಹಕಾರ ಸಂಘ ನಿಯಮಿತ ಬೆಟಗೇರಿ – ಗದಗ ವತಿಯಿಂದ 2025ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ನಿರ್ದೇಶಕರು, ವ್ಯಸವಸ್ಥಾಪಕರು ಇದ್ದರು.

ವಾಲ್ಮೀಕಿ ನಿಗಮ ಹಗರಣ ಹಿನ್ನೆಲೆ– ಕೋರ್ಟ್ ಆದೇಶ

ಜಪ್ತಿ ಮಾಡಿದ ಹಣ ನಿಗಮದ ಖಾತೆಗೆ ವರ್ಗಾಯಿಸಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿಎಲ್) ಹಣ ದುರ್ಬಳಕೆ ಪ್ರಕರಣದ ತನಿಖೆ ಸಂದರ್ಭದಲ್ಲಿ ವಶಪಡಿಸಿಕೊಂಡಿರುವ 6.11 ಕೋಟಿ ರೂಪಾಯಿ ಹಣವನ್ನು ನಿಗಮಕ್ಕೆ ವರ್ಗಾವಣೆ ಮಾಡಲು ವಿಶೇಷ ನ್ಯಾಯಾಲಯ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಆದೇಶಿಸಿದೆ.

ಶ್ರೀಪಾದ ನಾಯಕ ತಮ್ಮಣ್ಣವರರಿಗೆ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಬ್ರಾಹ್ಮಣ ಸಂಘ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಳಗುಂದ ಬ್ರಾಹ್ಮಣ ಸಮಾಜದ ಧುರೀಣ–ರು, ಸಮಾಜ ಸುಧಾರಕರಾದ ಶ್ರೀಪಾದ ನಾಯಕ ತಮ್ಮಣ್ಣವರ (ಚಿನಿವಾಲರ) ಇವರನ್ನು ಸನ್ಮಾನಿಸಲಾಯಿತು. ಶ್ರೀಪಾದ ನಾಯಕ ತಮ್ಮಣ್ಣವರ ಸಮಾಜಸೇವೆಯೊಂದಿಗೆ ಇನ್ನಷ್ಟು ಬೆಳೆಯಲಿ ಎಂದು ಅಭಿಮಾನಿ ಬಳಗದ ಎಂ.ಡಿ. ನರಗುಂದ, ಎ.ಎನ್. ಖಾತಾಖಾನಿ, ಮಂಜು ಮಜ್ಜಿಗುಡ್ಡ, ಸಿ.ಎಸ್. ಪತ್ರಿ, ಮಂಜು ಕುಂಬಾರ, ಕಿರಣ ಬಾತಾಖಾನಿ, ಶಿವಪ್ಪ ಮಡ್ಡಿ, ಬಸುವರಾಜ ವಡ್ಡಟ್ಟಿ ಸೇರಿದಂತೆ ಅಭಿಮಾನಿಗಳು ಹಾರೈಸಿದರು.

ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರಿಂದ ಅಲ್ಪಸಂಖ್ಯಾತರ ಬಿ.ಎಡ್ ಹಾಗೂ ಡಿ.ಎಡ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕವನ್ನು 6-1-2025 ರವರೆಗೆ ವಿಸ್ತರಿಸಲಾಗಿದೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಭ್ಯರ್ಥಿಗಳೆ ಹಾಜರಾಗಿ, ದಿನಾಂಕ:07-01-2025 ರಂದು ಸಾಯಂಕಾಲ 4.00 ಗಂಟೆಯೊಳಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ರವರ ಕಚೇರಿಗೆ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರಬೇಕು. ಅಭ್ಯರ್ಥಿಗಳ ಪೋಷಕರ ವರಮಾನ ರೂ 6.00 ಲಕ್ಷಕ್ಕೆ ಮೀರಿರಬಾರದು. ಅಂಚೆ ತೆರಪು/ಅರೆಕಾಲಿಕ/ದೂರ ಶಿಕ್ಷಣದಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಅರ್ಹರಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಗದಗ ಜಿಲ್ಲಾ ನ್ಯಾಯಾಲಯದ ಎದುರುಗಡೆ, ಗದಗ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಮಣಿಪುರ ಹಿಂಸಾಚಾರಕ್ಕೆ ಕ್ಷಮೆಯಾಚಿಸಿದ ಮುಖ್ಯಮಂತ್ರಿ ಬಿರೇನ್ ಸಿಂಗ್

ನನ್ನನ್ನು ಕ್ಷಮಿಸಿ, ಹಿಂದಿನದು ಮರತುಬಿಡಿ

■ ವಿಜಯಸಾಕ್ಷಿ ಸುದ್ದಿ, ಮಣಿಪುರ

ಮಣಿಪುರ ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಅವರು ಮಂಗಳವಾರ ಮೇ 2023 ರಿಂದ ಸಂಭವಿಸುತ್ತಿರುವ ಜನಾಂಗೀಯ ಹಿಂಸಾಚಾರಕ್ಕಾಗಿ ರಾಜ್ಯದ ಜನರಲ್ಲಿ ಕ್ಷಮೆಯಾಚಿಸಿದ್ದಾರೆ. "ಹಿಂದಿನದನ್ನು ಮರೆತುಬಿಡಿ, ನನ್ನನ್ನು ಕ್ಷಮಿಸಿ" ಎಂದು ಎಲ್ಲ ವರ್ಗಗಳಿಗೆ ಮನವಿ ಮಾಡಿದ್ದಾರೆ.

ಇಂಫಾಲ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಿಂಗ್, ಹಿಂಸಾಚಾರವನ್ನು ನಿಭಾಯಿಸುವ ಬಗ್ಗೆ ಪ್ರತಿಪಕ್ಷಗಳ ಟೀಕೆಗೆ ಗುರಿಯಾಗಿದ್ದರು. "ಮಣಿಪುರದಲ್ಲಿ ಶಾಂತಿಯನ್ನು ಪುನಃಸ್ಥಾಪಿಸಲಾಗುತ್ತಿದೆ" ಎಂದು ಒತ್ತಿ ಹೇಳಿದರು.

2024ರ ಲೋಕಸಭಾ ಚುನಾವಣೆಯ ವಿಶ್ವದ ಅತಿದೊಡ್ಡ ಚುನಾವಣೆಯ ಕುರಿತು ಭಾರತ ಚುನಾವಣಾ ಆಯೋಗದಿಂದ ಮಾಹಿತಿ

ಅಂಕಿ-ಅಂಶಗಳ ಸಮಗ್ರ ದತ್ತಾಂಶ ಪ್ರಕಟ

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ ಚುನಾವಣಾ ಆಯೋಗವು 2024ರ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ 42 ಅಂಕಿ ಅಂಶಗಳ ವರದಿಗಳು ಮತ್ತು ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಒಡಿಶಾ ಮತ್ತು ಸಿಕ್ಕಿಂ ಸೇರಿ ನಾಲ್ಕು ರಾಜ್ಯಗಳಲ್ಲಿ ಏಕಕಾಲದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ 14 ಅಂಕಿ-ಅಂಶಗಳ ವರದಿಗಳ ಸಮಗ್ರ ದತ್ತಾಂಶಗಳನ್ನು ಬಿಡುಗಡೆ ಮಾಡಿದೆ.

ಆಯೋಗದ ಈ ಸ್ವಯಂ ಪ್ರೇರಿತ ಕಾರ್ಯವು ಭಾರತದ ಚುನಾವಣಾ ವ್ಯವಸ್ಥೆಯ ಆಧಾರವಾಗಿರುವ ಸಾರ್ವಜನಿಕ ನಂಬಿಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದು, ವ್ಯಾಪಕವಾದ, ಸವಿವರವಾದ ದತ್ತಾಂಶ ಬಿಡುಗಡೆಯು, ಶೈಕ್ಷಣಿಕ, ಸಂಶೋಧನೆ ಮತ್ತು ಸಾರ್ವಜನಿಕರು ಸೇರಿದಂತೆ ಎಲ್ಲಾ ಪಾಲುದಾರರಿಗೆ ಚುನಾವಣೆಗೆ ಸಂಬಂಧಿಸಿದ ದತ್ತಾಂಶದ ಪ್ರತಿ ವಿವರಗಳನ್ನು ಬಹಿರಂಗಪಡಿಸುವಿಕೆಯ ಮೂಲಕ ಹೆಚ್ಚಿನ

ಪಾರದರ್ಶಕತೆ ಕಾಪಾಡಿಕೊಳ್ಳುವುದು ಆಯೋಗದ ನೀತಿಯ ಮುಂದುವರಿಕೆಯಾಗಿದೆ.

ಈ ದತ್ತಾಂಶ ವಿವರಗಳು ವಿವಿಧ ರೀತಿಯ ಮಾಹಿತಿಗಳನ್ನು ಒಳಗೊಂಡಿವೆ. ಆಳವಾದ ಒಳನೋಟಗಳು ಮತ್ತು ವಿಶ್ಲೇಷಣೆಗಳನ್ನು ನಡೆಸಲು ಸಿದ್ಧಪಡಿಸಲಾದ ಈ ದತ್ತಾಂಶವನ್ನು ಸಂಶೋಧಕರು, ನೀತಿ ನಿರೂಪಕರು ಮತ್ತು ಪತ್ರಕರ್ತರು ಈಗ ಬಳಸಿಕೊಳ್ಳಬಹುದಾಗಿದೆ. 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ದತ್ತಾಂಶಗಳ ಸವಿವರವಾದ ವರದಿ ಮತ್ತು ಅಂಕಿ-ಅಂಶಗಳನ್ನು ಭಾರತ ಚುನಾವಣಾ ಆಯೋಗದ ವೆಬ್ ಸೈಟ್ ಛಣಣಥಿ://ತಿತಿತಿ.ಜಛಿಣ.ಠಿಠಿತ.ಎಟಿ/ಣಚಿಣಛಣಛಿಟಿ-ಡಿಜ-ಠಿಠಡಿಣ ಮೂಲಕ ಪಡೆದುಕೊಳ್ಳಬಹುದು.

ಮತದಾರರ ವಿವರ: ಲೋಕಸಭೆ ಚುನಾವಣೆ 2019ರಲ್ಲಿ 91,19,50,734ಕ್ಕೆ ಹೊಲಿಸಿದರೆ, 2024ರಲ್ಲಿ 97,97,51,847 ನೋಂದಾಯಿತ ಮತದಾರರಿದ್ದಾರೆ. 2019ಕ್ಕಿಂತ 2024ರಲ್ಲಿ ಒಟ್ಟು ಮತದಾರರಲ್ಲಿ ಶೇ. 7.43ರಷ್ಟು ಹೆಚ್ಚಳವಾಗಿದೆ. 2024ರಲ್ಲಿ 64.64 ಕೋಟಿ ಮತಗಳು ಚಲಾವಣೆಯಾಗಿವೆ. ಆದರೆ 2019ರಲ್ಲಿ 61.4 ಕೋಟಿ ಮತಗಳು ಚಲಾವಣೆಯಾಗಿದ್ದವು. ಇವಿಎಂ ಮತ್ತು ಅಂಚೆ ಮತಗಳು ಸೇರಿ 64,64,20,869 ಮತಗಳು ಚಲಾವಣೆಯಾಗಿದ್ದವು ಇದರಲ್ಲಿ 64,21,39,275 ಇವಿಎಂ ಮತಗಳು ಇದರಲ್ಲಿ 32,93,61,948 ಪುರುಷರು ಮತ್ತು 31,27,64,269 ಮಹಿಳೆಯರು ಮತ್ತು 13,058 ತೃತೀಯ ಲಿಂಗ ಮತದಾರರು ಮತ ಚಲಾಯಿಸಿದ್ದಾರೆ. 42,81,594 ಅಂಚೆ ಮತ ಪತ್ರಗಳು ಬಂದಿವೆ.

ಆಸ್ಸಾಂ ರಾಜ್ಯದ ಧುಬ್ರಿ ಲೋಕಸಭಾ ಮತಕ್ಷೇತ್ರದಲ್ಲಿ ಅತಿ ಹೆಚ್ಚು ಶೇ.92.3ರಷ್ಟು ಮತದಾನವಾಗಿದೆ. ಜಮ್ಮು-ಕಾಶ್ಮೀರದ ಶ್ರೀನಗರ ಲೋಕಸಭಾ ಮತಕ್ಷೇತ್ರದಲ್ಲಿ ಅತಿ ಕಡಿಮೆ ಶೇ.38.7ರಷ್ಟು ಮತದಾನವಾಗಿದೆ. ಇಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಶೇ. 14.4ರಷ್ಟು ಮತದಾನವಾಗಿತ್ತು. ದೇಶದಲ್ಲಿ 11 ಲೋಕಸಭಾ ಮತಕ್ಷೇತ್ರದಲ್ಲಿ ಶೇ. 50ಕ್ಕಿಂತ ಕಡಿಮೆ ಮತದಾನವಾಗಿದೆ. 2024ರಲ್ಲಿ 63,71,839 (ಶೇ.0.99) ನೋಟಾ ಮತಗಳಾಗಿವೆ. ಇದು 2019 ರಲ್ಲಿ ಶೇ.1.06ರಷ್ಟಿತ್ತು. ಶೇ. 27.09ರಷ್ಟು ಲಿಂಗ ಪರಿವರ್ತಿತ ಮತದಾರರು ಮತದಾನ ಮಾಡಿದ್ದಾರೆ.

ಮಹಿಳಾ ಅಭ್ಯರ್ಥಿಗಳು: 2019ರಲ್ಲಿ 726 ಮಹಿಳಾ ಅಭ್ಯರ್ಥಿಗಳಿಗೆ ಹೋಲಿಸಿದರೆ, 2024ರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 800 ಆಗಿತ್ತು. ಅತಿ ಹೆಚ್ಚು ಮಹಿಳಾ ಅಭ್ಯರ್ಥಿಗಳನ್ನು ಹೊಂದಿರುವ ರಾಜ್ಯ ಮಹಾರಾಷ್ಟ್ರ ಆಗಿತ್ತು.

ಫಲಿತಾಂಶಗಳು

2024ರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ದೇಶದಲ್ಲಿ ಒಟ್ಟು 6 ರಾಷ್ಟ್ರೀಯ ಪಕ್ಷಗಳು ಭಾಗವಹಿಸಿದ್ದವು. ಈ 6 ಪಕ್ಷಗಳ ಒಟ್ಟು ಮತ ಹಂಚಿಕೆಯು ಒಟ್ಟು ಮಾನ್ಯ ಮತಗಳ ಶೇ. 63.35ರಷ್ಟು ಆಗಿತ್ತು. 2019ರಲ್ಲಿ 6,923 ಅಭ್ಯರ್ಥಿಗಳಿಗೆ ಹೋಲಿಸಿದರೆ 2024ರ ಚುನಾವಣೆಯಲ್ಲಿ 7,190 ಅಭ್ಯರ್ಥಿಗಳು ಠೇವಣಿಗಳನ್ನು ಕಳೆದುಕೊಂಡಿದ್ದಾರೆ ಮತ್ತು ಗುಜರಾತ್ ರಾಜ್ಯದ ಸೂರತ್ (ಒಂದು) ಲೋಕಸಭಾ ಕ್ಷೇತ್ರಕ್ಕೆ ಅವಿರೋಧ ಆಯ್ಕೆಯಾಗಿತ್ತು.

ಮಹಿಳಾ ಶಕ್ತಿ

2024ರಲ್ಲಿ ಒಟ್ಟು 97,97,51,847 ನೋಂದಾಯಿತ ಮಹಿಳಾ ಮತದಾರರಿದ್ದು, 2019ರಲ್ಲಿ ಶೇ. 48.09 (43,85,37,911) ರಷ್ಟು ಇದ್ದ ಒಟ್ಟು ಮಹಿಳಾ ಮತದಾರರಿಗೆ ಹೋಲಿಸಿದರೆ 2024ರಲ್ಲಿ ಶೇ. 48.62 (47,63,11,240) ಮಹಿಳಾ ಮತದಾರರಿದ್ದರು. 2024ರಲ್ಲಿ ಅತಿ ಹೆಚ್ಚು ಮಹಿಳಾ ಮತದಾರರನ್ನು ಪುದುಚೇರಿ (53.03%), ಕೇರಳ (51.56%) ರಾಜ್ಯಗಳು ಹೊಂದಿವೆ. 2024ರಲ್ಲಿ, ಪ್ರತಿ 1000 ಪುರುಷ ಮತದಾರರಿಗೆ ಮಹಿಳಾ ಮತದಾರರ ಸಂಖ್ಯೆ ಗರಿಷ್ಠ ಅಂದರೆ 946 ಆಗಿದ್ದು, 2019ರಲ್ಲಿ ಪ್ರತಿ ಸಾವಿರ ಪುರುಷರಿಗೆ 926 ಮಹಿಳಾ ಮತದಾರರಿದ್ದರು.

ಮೈಕ್ರೋ ಫೈನಾನ್ಸ್ ಹಾವಳಿ ತಡೆಗಟ್ಟಲು ಮನವಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣಶೆಟ್ಟಿ ಬಣದ ಕಾರ್ಯಕರ್ತರು ಮಂಗಳವಾರ ಪಟ್ಟಣದಲ್ಲಿ ಹೆಚ್ಚುತ್ತಿರುವ ಮೈಕ್ರೋ ಫೈನಾನ್ಸ್ ಹಾವಳಿ ತಡೆಗಟ್ಟುವಂತೆ ಒತ್ತಾಯಿಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಮೈಕ್ರೋ ಫೈನಾನ್ಸ್ ಕಂಪನಿಯವರು ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಸಾಲ ನೀಡಿ ಹೆಚ್ಚಿನ ಬಡ್ಡಿ ವಸೂಲಿ ಮಾಡುತ್ತಿದ್ದಾರೆ. ಸಾಲ ಪಡೆದವರು ಅನೇಕ ಕಾರಣಗಳಿಂದ ಸಾಲ ಮರುಪಾವತಿ ಮಾಡಲು ಕೊಂಚ ವಿಳಂಬ ಮಾಡಿದರೆ ಅವರ ಮನೆಯ ಮುಂದೆಯೇ ಕುಳಿತುಕೊಳ್ಳುವ ಫೈನಾನ್ಸ್‌ನವರ ಕಿರುಕುಳಕ್ಕೆ ಅನೇಕರು ಊರು ತೊರೆದಿದ್ದು ಆತ್ಮಹತ್ಯೆಯ ಬಗ್ಗೆ ಯೋಚಿಸುತ್ತಿದ್ದಾರೆ.

ಫೈನಾನ್ಸ್ ಕಂಪನಿಯವರಿಂದ ಸಾಲ ಪಡೆದವರ ಮನೆಯ ಮುಂದೆ ಬೆಳಿಗ್ಗೆಯಿಂದ ರಾತ್ರಿ 11 ಗಂಟೆವರೆಗೂ ಕುಳಿತು ಅವಮಾನ, ಅವ್ಯಾಚ್ಯ ಪದ ಬಳಕೆ ಮಾಡುತ್ತಿದ್ದಾರೆ. ಪಟ್ಟಣದಲ್ಲಿ ಅನೇಕ ಮೈಕ್ರೋ ಫೈನಾನ್ಸ್‌ಗಳು ತಲೆ ಎತ್ತಿದ್ದು, ಯಾರ ಭಯವೂ ಇಲ್ಲದೇ ತಮ್ಮಿಷ್ಟದಂತೆ ಆಡುತ್ತಿದ್ದಾರೆ. ಆದ್ದರಿಂದ ಸಾಲ ಪಡೆದ ಅನೇಕರು ಇವರ ಅಟ್ಟಹಾಸಕ್ಕೆ ನಲುಗಿ ಹೋಗಿದ್ದು, ಆತ್ಮಹತ್ಯೆಯ ದಾರಿ ಹಿಡಿಯುವ ಮೊದಲೇ ಸಂಬಂಧಪಟ್ಟವರು ಇವುಗಳ ಮೇಲೆ ನಿಯಂತ್ರಣ ಹೇರಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಜಿಲ್ಲಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ಉಪತಹಸೀಲ್ದಾರ ಸಂತೋಷ ಕಿಮಾಯಿ ಸ್ವೀಕರಿಸಿ ಸೂಕ್ತ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ರವಾನಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಕರವೇ ಪ್ರವೀಣಶೆಟ್ಟಿ ಬಣದ ನಗರ ಘಟಕದ ಅಧ್ಯಕ್ಷ ಶ್ರೇಯಾಂಕ ಹಿರೇಮಠ, ತಾಲೂಕು ಪ್ರ.ಕಾರ್ಯದರ್ಶಿ ಅಮರೇಶ ಗಾಂಜಿ, ಚಂದ್ರು ಪಾಣಿಗಟ್ಟಿ, ಚಂದ್ರು ಬಾರ್ಕಿ, ಪ್ರಜ್ವಲ ಗಾಂಜಿ, ಇಶಾಖ ಬಿಜಾಪುರ, ಮಹೇಶ ಕರಮಣ್ಣವರ, ಸಂಜೀವ ದೇಸಾಯಿ, ಮಾಲತೇಶ ಗುರಿಕಾರ, ವೀರೇಶ ಹಗ್ಗರದ, ವಾಸು ಗೋಸಾವಿ, ಬಸನಗೌಡ ಮನ್ನಂಗಿ, ನಾಶಿರಖಾನ ಕಿತ್ತೂರ, ಗುರುರಾಜ ಲಾಲಿ, ಸೇರಿ ಅನೇಕ ಕಾರ್ಯಕರ್ತರಿದ್ದರು.

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಮಹಿಳಾ ಮೋರ್ಚಾ ಆರೋಪ

ಬಾಣಂತಿಯರ ಸಾವಿಗೆ ಸರ್ಕಾರವೇ ಕಾರಣ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾಂಗ್ರೆಸ್ ಸರಕಾರದ ನಿರ್ಲಕ್ಷ್ಯದಿಂದ ರಾಜ್ಯದಲ್ಲಿ ಬಾಣಂತಿಯರು, ಶಿಶಿಗಳು ಸಾವನ್ನಪ್ಪುತ್ತಿವೆ. ಆದರೆ, ಸದನದಲ್ಲಿ ಈ ಕುರಿತು ಚರ್ಚೆಯಾಗಲಿಲ್ಲ ಎಂದು ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಮಹಿಳಾ ಮೋರ್ಚಾ ಆರೋಪಿಸಿದೆ.

ಈ ಬಗ್ಗೆ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಹಿಳಾ ಮೋರ್ಚಾ ಗದಗ ಜಿಲ್ಲಾಧ್ಯಕ್ಷೆ ನಿರ್ಮಲಾ ಕೊಳ್ಳಿ ಹೇಳಿಕೆ ನೀಡಿ ಮಾತನಾಡಿ, ರಾಜ್ಯದಲ್ಲಿ ಸರಣಿಯಂತೆ ಬಾಣಂತಿ, ಶಿಶುಗಳು ಮೃತಪಟ್ಟರೂ ಅಧಿಕಾರಿಗಳು ಮತ್ತು ಸಚಿವರು ನಿರ್ಲಕ್ಷ್ಯ ವಹಿಸಿದ್ದಾರೆ. ದುರಹಂಕಾರದಿಂದ ನಡೆದುಕೊಳ್ಳುತ್ತಿರುವ ಸರಕಾರಕ್ಕೆ ತಕ್ಕ ಉತ್ತರ ಕೊಡಬೇಕಾಗಿದೆ. ತಾಯಂದಿರ ಕಣ್ಣೀರು ಒರೆಸುವ ಕೆಲಸವಾಗಬೇಕಿದೆ. ಹಲವು ಹಗರಣಗಳಲ್ಲಿ ಭಾಗಿಯಾದ ಸಿದ್ಧರಾಮಯ್ಯ ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಿಜವಾಗಿಯೂ ಗೌರವವಿದ್ದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾಧ್ಯಕ್ಷರಾದ ತೋಟಪ್ಪ(ರಾಜು) ಕುರುಡಗಿ ಮಾತನಾಡಿ, ಜಾನುವಾರುಗಳಿಗೆ ನೀಡಬೇಕಾದ ಔಷಧವನ್ನು ಮನುಷ್ಯರಿಗೆ ನೀಡಲಾಗುತ್ತಿದೆ. ಸರಕಾರದ ತಪ್ಪನ್ನು ವೈದ್ಯರು ಒಪ್ಪಿಕೊಳ್ಳುತ್ತಿದ್ದಾರೆ. ಆದರೆ, ಸಚಿವರು ಒಪ್ಪಿಕೊಳ್ಳುತ್ತಿಲ್ಲ. ಎಲ್ಲಿಯವರೆಗೆ ಈ ಸರಕಾರ ಅಧಿಕಾರದಲ್ಲಿ ಇರುತ್ತದೆಯೋ, ಅಲ್ಲಿಯವರೆಗೆ ಬಾಣಂತಿಯರು ಸುರಕ್ಷಿತವಲ್ಲ. ಬಾಣಂತಿಯರ ಸಾವು ಪ್ರಕರಣದಲ್ಲಿ ವಜಾಗೊಳಿಸಬೇಕಿರುವುದು ಆರೋಗ್ಯ ಸಚಿವರನ್ನೇ ಹೊರತು ವೈದ್ಯಾಧಿಕಾರಿಗಳನ್ನಲ್ಲ.

ಈ ಸಂದರ್ಭದಲ್ಲಿ ಪಕ್ಷದ ಹಿರಿಯರಾದ ಎಂ.ಎಸ್. ಕರಿಗೌಡ್ರ, ಪ್ರಮುಖರಾದ ಅನಿಲ ಅಬ್ಬಿಗೇರಿ, ಅಶ್ವಿನಿ ಜಗತಾಪ್, ವಂದನಾ ವರ್ಣೇಕರ್, ಅಶ್ವಿನಿ ಅಂಕಲಕೋಟಿ, ಕಮಲಾಕ್ಷೀ ಗೊಂದಿ, ಪಾರ್ವತಿ ಪಟ್ಟಣಶೆಟ್ಟಿ, ಜಯಶ್ರೀ ಅಣ್ಣಿಗೇರಿ, ವಿಜಯಲಕ್ಷ್ಮೀ ಮಾನ್ವಿ, ಕವಿತಾ ಬಂಗಾರಿ, ಸ್ವಾತಿ ಅಕ್ಕಿ, ಪದ್ಮಿನಿ ಮುತ್ತಲದಿನ್ನಿ, ಶೇಖವ್ವ ಮಾಸರಡ್ಡಿ, ಸುಮಂಗಲಾ ಕೊನೆವಾಲ ಸೇರಿದಂತೆ ಮಹಿಳಾ ಪ್ರಮುಖರು ಉಪಸ್ಥಿತರಿದ್ದರು.

ಬಾಣಂತಿ, ಶಿಶುಗಳ ಸಾವು ಖಂಡನೀಯ ಇದು ಸರಕಾರವೇ ಮಾಡಿರುವ ಹತ್ಯೆ ಎಂದು ತೋಟಪ್ಪ(ರಾಜು) ಕುರುಡಗಿ ಆರೋಪಿಸಿದರಲ್ಲದೆ, ಆಸ್ಪತ್ರೆಗಳಿಗೆ ಅವಧಿ ಮೀರಿದ ಔಷಧಗಳನ್ನು ಪೂರೈಸಿದ್ದಾರೆ. ಹೆಚ್ಚಿನ ಲಾಭದ ಆಸೆಗಾಗಿ ದಿನೇಶ ಗುಂಡೂರಾವ್ ಅವರು ಒಂದೇ ಏಜೆನ್ಸಿಗೆ ಗುತ್ತಿಗೆ ನೀಡಿದ್ದರಿಂದ ಅವಾಂತರ ಸೃಷ್ಟಿಯಾಗಿದೆ. ಔಷಧ ಪೂರೈಕೆಯಲ್ಲಿ ಪಾರದರ್ಶಕತೆ ಬೇಕು ಎಂದರು.

ಎಸ್‌ಜೆಜೆಎಂ ಸಂಯುಕ್ತ ಪದವಿಪೂರ್ವ ಮಾಹಾವಿದ್ಯಾಲಯದಲ್ಲಿ ಸ್ನೇಹ ಸಮ್ಮೇಲನ

ತಂದೆ-ತಾಯಿ, ಗುರುವನ್ನು ಮರೆಯದಿರಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಹೆತ್ತು, ಹೊತ್ತು, ಸಾಕಿ-ಸಲುಹಿದ ಹಾಗೂ ವಿದ್ಯಾದಾನ ಮಾಡಿದ ತಂದೆ, ತಾಯಿ, ಗುರುಗಳನ್ನು ಮರೆಯದಿರಿ ಎಂದು ಶಿವಾನಂದ ದಳವೆ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಕಲಾ ಭವನದಲ್ಲಿ ಎಸ್‌ಜೆಜೆಎಂ ಸಂಯುಕ್ತ ಪದವಿಪೂರ್ವ ಮಾಹಾವಿದ್ಯಾಲಯದ 2024/25ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಲನದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿ ಜೀವನ ಬಂಗಾರದ ಬದುಕಾಗಿದ್ದು, ಈ ಸಮಯದಲ್ಲಿ ಏಕಾಗ್ರತೆಯಿಂದ, ಸತತ ಪ್ರಯತ್ನದಿಂದ ಅಭ್ಯಾಸ ಮಾಡಬೇಕು. ಪಠ್ಯದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಅತಿಯಾದ ಮೊಬೈಲ್ ಬಳಕೆ ಮಾಡದೇ ತಂದೆ-ತಾಯಿಗಳು ಹಾಗೂ ಗುರುಗಳು ಹೇಳಿದ ಮಾತನ್ನು ತಪ್ಪದೆ ಆಲಿಸುವುದರಿಂದ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಲು ಸಾಧ್ಯವಾಗುತ್ತದೆ ಎಂದರು.

ಬಾಲಲೀಲಾ ಮಾಹಾಂತ ಶಿವಯೋಗಿ ಶಿಕ್ಷಣ ಸಮಿತಿ ಅಧ್ಯಕ್ಷ ಎಂ.ಡಿ. ಬಟ್ಟೂರ ಮಾತನಾಡಿ, ಪ್ರತಿಯೊಬ್ಬ ಮಗುವಿನಲ್ಲಿ ತನ್ನದೆ ಆದ ಪ್ರತಿಭೆ ಅಡಕವಾಗಿರುತ್ತದೆ. ಅದನ್ನು ಸೂಕ್ತ ಸಮಯದಲ್ಲಿ ಹೊರ ಹಾಕಲ ಈ ಶಿಕ್ಷಣ ಸಮಿತಿ ಯಾವಾಗಲೂ ಸಹಕಾರ ನೀಡುತ್ತದೆ. 2000-01ರ ಹಳೆಯ ವಿದ್ಯಾರ್ಥಿಗಳು 60 ಸಾವಿರ ರೂ ದತ್ತಿ ನಿಧಿ ಹಾಗೂ ಎಫ್.ಆರ್. ಬಾತಾಖಾನಿ ಅವರ ಸ್ಮರಣಾರ್ಥ 25 ಸಾವಿದ ದತ್ತಿ ನಿಧಿ ನೀಡುವ ಮೂಲಕ ಶಾಲೆಯ ಋಣವನ್ನು ತೀರಿಸಿದ್ದಾರೆ ಎಂದರು.

ಕಲಾವಿದ ಅನಂತ ದೇಶಪಾಂಡೆ ದ.ರಾ. ಬೇಂದ್ರೆ ಅವರ ಹಾಸ್ಯಗಳ ಮೂಲಕ ಮಕ್ಕಳನ್ನು ರಂಜಿಸಿ ಕನ್ನಡ ನಾಡು-ನುಡಿ, ನೆಲ-ಭಾಷೆಗಳ ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ವಿದ್ಯಾರ್ಥಿಯ ಜವಾಬಾಽರಿಯಾಗಿದೆ. ಕಲಿತ ಶಾಲೆ, ಕಲಿಸಿದ ಗುರು, ಹೆತ್ತು-ಹೊತ್ತು ಸಾಕಿದ ತಂದೆ-ತಾಯಿಗಳನ್ನು ಎಂದಿಗೂ ಮರೆಯಬಾರದು ಎಂದರು.

ಮುಖ್ಯ ಅತಿಥಿಗಳಾಗಿ ಸಾಹಿತಿ ಹಾಗೂ ವಿಶ್ರಾಂತ ಪ್ರಾಧ್ಯಾಪಕ ಡಾ. ಶ್ಯಾಮಸುಂದರ ಬಿದರಕುಂದಿ, ಕಲಾವಿದ ಅನಂತ ದೇಶಪಾಂಡೆ, ಪ್ರಾಚಾರ್ಯ ಎ.ಎಂ. ಅಂಗಡಿ, ಇ.ಎಂ. ಗುಳೆದಗುಡ್ಡ, ವಿಜಯ ನೀಲಗುಂದ, ಡಾ. ಎಸ್.ಸಿ. ಚವಡಿ, ಬಸವರಾಜ ಬಡ್ನಿ, ಪಕ್ಕೀರಯ್ಯ ಅಮೋಘಿಮಠ